ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಜನವರಿ 04, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 232 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736  91642 99999

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ (ರಿ), ದಾವಣಗೆರೆ.
ಸಿದ್ಧಲಿಂಗೇಶ್ವರ ನಗರ, ದಾವಣಗೆರೆ – 577002
ಸಂಸ್ಥಾಪಕರ 60 ವರ್ಷಗಳ ಶಿಕ್ಷಣಸೇವೆಯ ಗೌರವಾರ್ಥ
ರಾಜ್ಯದ ಪ್ರತಿಷ್ಠಿತ ಕಾಲೇಜಿನಲ್ಲಿ ಕೇವಲ 1₹ ಶುಲ್ಕದಲ್ಲಿ ಪಿಯುಸಿ ಸೈನ್ಸ್ ಶಿಕ್ಷಣ ಪಡೆಯಲು ಸುವರ್ಣಾವಕಾಶ
PUC Science, NEET/JEE/CET Coaching ಸಹಿತ 1₹ (ಒಂದು ರೂ. ಮಾತ್ರ)
ಗಮನಿಸಿರಿ: 1. ಕಾಲೇಜು ನಡೆಸುವ ಸ್ಕಾಲರ್‌ಶಿಪ್ ಪರೀಕ್ಷೆ ಬರೆದಿರಬೇಕು. 2. ಪೋಷಕರ ವಾರ್ಷಿಕ ಆದಾಯ 8 ಲಕ್ಷದ ಒಳಗಿರಬೇಕು. 3. ಆಯ್ಕೆಯಾದ 60 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ.
ವಿದ್ಯಾರ್ಥಿಗಳು ತಮ್ಮ ಹೆಸರನ್ನು ಈ ಮೊಬೈಲ್ ಸಂಖ್ಯೆಗೆ ವಾಟ್ಸಪ್ ಮೂಲಕ ಕಳುಹಿಸಿ. Ph: 8073301604, 6361616780
II PU 2022 593/600 VINAYAKA L. 98.83%
II PU 2022 591/600 CHINMAY M.D. 98.50%
NEET 659/720 Harshith S. NEET 2020 : 659
NEET 654/720 Abhilasha K.S. NEET 2021 : 654
60 MCQ's
Science -30, Maths -30
From SSLC Text Book
Every Sunday between 9 to 12
SST: Siddaganga Scholarship Test
ಸ್ಕಾಲರ್‌ಶಿಪ್ ಪರೀಕ್ಷೆಗೆ ನೋಂದಾಯಿಸಲು QR Code

# ಹಿಂದೂ ರಾಷ್ಟ್ರ ಆದರೆ ಪಾಕ್‌ನಂತೆ ವಿನಾಶ

## ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಯತೀಂದ್ರ ಸಿದ್ದರಾಮಯ್ಯ

ದಾವಣಗೆರೆ, ಜ. 3 - ಪಾಕಿಸ್ತಾನ, ಆಫ್ಘಾನಿಸ್ತಾನ ಹಾಗೂ ಇರಾನ್‌ಗಳು ಧರ್ಮದ ಹೆಸರಿನಲ್ಲಿ ಆಡಳಿತ ಮಾಡಿದ್ದರಿಂದ ಸಂಪೂರ್ಣ ವಿನಾಶವಾಗಿವೆ. ಭಾರತವೂ ಹಿಂದೂ ರಾಷ್ಟ್ರ ಆದರೆ ಪಾಕಿಸ್ತಾನದಂತೆ ವಿನಾಶದ ಕಡೆ ಹೋಗುತ್ತದೆ ಎಂದು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಎಚ್ಚರಿಸಿದ್ದಾರೆ.

ಇಲ್ಲಿಗೆ ಸಮೀಪದ ರುದ್ರನಕಟ್ಟೆಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಸ್ಥೆ ವತಿಯಿಂದ ಆಯೋಜಿಸಲಾಗಿದ್ದ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ವ್ಯವಸ್ಥೆಯನ್ನು ಧರ್ಮ ನಿಯಂತ್ರಿಸಿದರೆ ಬದಲಾವಣೆ ಸಾಧ್ಯವಿಲ್ಲ. ಸಂವಿಧಾನದಿಂದ ಮಾತ್ರ ಸ್ವಾಭಿಮಾನ ಹಾಗೂ ಹಕ್ಕು ಪಡೆಯಲು ಸಾಧ್ಯವಾಗಿದೆ ಎಂದವರು ಹೇಳಿದರು.

ಜಾತ್ಯತೀತತೆಗೆ ಬಿಜೆಪಿ ಹಾಗೂ ಆರ್.ಎಸ್.ಎಸ್.ಗಳಿಂದ ಅಪಾಯ ಎದುರಾಗಿದೆ. ಅವರು ಹಿಂದೂ ರಾಷ್ಟ್ರ ಮಾಡಲು ಹೊರಟಿದ್ದಾರೆ. ಆದರೆ, ಭಾರತ ಹಿಂದೂ ರಾಷ್ಟ್ರವಾದರೆ ಅದಕ್ಕಿಂತ ದೊಡ್ಡ ದುರಂತ ಇಲ್ಲ ಎಂದು ಅಂಬೇಡ್ಕರ್ ಹೇಳಿದ್ದರು. ಧರ್ಮದ ಹೆಸರಿನಲ್ಲಿ ಜನ ಭಾವುಕರಾಗುತ್ತಾರೆ. ಇರುವ ಸಮಸ್ಯೆ ಬಿಟ್ಟು ಧರ್ಮದ ಹಿಂದೆ ಹೋಗುತ್ತಾರೆ ಎಂದು ಯತೀಂದ್ರ ತಿಳಿಸಿದರು.

ಐಎಎಸ್, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಂತಹ ಹುದ್ದೆಗಳಲ್ಲಿ ಹಿಂದುಳಿದ ವರ್ಗದ ಎಷ್ಟು ಜನರಿದ್ದಾರೆ? ಹಿಂದುಳಿದ ವರ್ಗದ ಎಷ್ಟು ಜನ ಶ್ರೀಮಂತರಿದ್ದಾರೆ? ಈಗ ಮೇಲ್ವರ್ಗದವರೇ ಸಮಾಜ ನಿಯಂತ್ರಿಸುತ್ತಿದ್ದಾರೆ. ಇದು ತಪ್ಪಬೇಕಾದರೆ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳು ಸಿಗಬೇಕು ಎಂದವರು ಪ್ರತಿಪಾದಿಸಿದರು.

ಮಾಜಿ ಸಚಿವ ಹೆಚ್.ಎಂ. ರೇವಣ್ಣ ಮಾತನಾಡಿ, ಬರುವ ಜ.17ರಂದು ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆಯನ್ನು ದೇಶಕ್ಕೆ ಲೋಕಾರ್ಪಣೆ ಮಾಡಲಾಗುವುದು. ಇದು ದೇಶಭಕ್ತಿ ಸ್ಫೂರ್ತಿಯ ತಾಣವಾಗಲಿದೆ ಎಂದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಘಟನೆಯ ರಾಜ್ಯಾಧ್ಯಕ್ಷ ರಾಜಶೇಖರ್ ದೊಡ್ಡಣ್ಣ ಮಾತನಾಡಿ, ರಾಜ್ಯದ ಹಲವೆಡೆ 101 ಸಂಗೊಳ್ಳಿ ರಾಯಣ್ಣನ ಪ್ರತಿಮೆ ಸ್ಥಾಪಿಸುವ ಗುರಿ ಇದೆ. ಇಲ್ಲಿ ಸ್ಥಾಪಿಸಲಾಗಿರುವ ಮೂರ್ತಿ 31ನೇಯದು ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಇನ್‌ಸೈಟ್ಸ್ ಐಎಎಸ್ ಸ್ಥಾಪಕ ಜಿ.ಬಿ. ವಿನಯ್ ಕುಮಾರ್, (3ನೇ ಪುಟಕ್ಕೆ)



# ಎಸ್ಸಿ - ಎಸ್ಟಿ, ಹಿಂದುಳಿದ ಶಾಸಕರು ಕಾಂತರಾಜ್ ವರದಿಗೆ ಆಗ್ರಹಿಸಲಿ: ಈಶ್ವರಾನಂದಪುರಿ ಶ್ರೀ

ದಾವಣಗೆರೆ, ಜ. 3 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಖ ನೋಡಿಕೊಂಡು ಜನರು ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ಶಾಸಕರಿಗೆ ಮತ ಹಾಕಿದ್ದಾರೆ. ಅವರು ಕಾಂತರಾಜ್ ವರದಿ ಪರ ಮಾತನಾಡದೇ ಇದ್ದರೆ ಮೋಸ ಮಾಡಿದಂತೆ ಎಂದು ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ರುದ್ರನಕಟ್ಟೆಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

**ಕಾಂತರಾಜ್ ವರದಿ ವಿರೋಧಿಸಿರುವ 67 ಶಾಸಕರಿಗೆ ಹಿಂದುಳಿದ ವರ್ಗದವರು ಮತ ಹಾಕಬಾರದು.**
**- ಶ್ರೀ ಈಶ್ವರಾನಂದಪುರಿ ಸ್ವಾಮೀಜಿ**

ಕಾಂತರಾಜ್ ವರದಿ ಇನ್ನೂ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ, ಸ್ವೀಕರಿಸಿಯೂ ಇಲ್ಲ. ಆದರೂ, ಅದರಲ್ಲಿ ಲೋಪ ಕಂಡು ಹಿಡಿಯಲಾಗುತ್ತಿದೆ. ಈ ವರದಿ ವಿರೋಧಿಸಿ (3ನೇ ಪುಟಕ್ಕೆ)

# ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾಂಗ್ರೆಸ್‌ಗೆ ಇಷ್ಟವಿಲ್ಲ



**ಹುಬ್ಬಳ್ಳಿಯಲ್ಲಿ ಕರ ಸೇವಕರ ಬಂಧನಕ್ಕೆ ವಿಪಕ್ಷ ನಾಯಕ ಆರ್. ಅಶೋಕ್ ತರಾಟೆ**

ದಾವಣಗೆರೆ, ಡಿ. 3- ಅಯೋಧ್ಯೆಯಲ್ಲಿ ರಾಮ ಮಂದಿರ ಇರುವುದು ಕಾಂಗ್ರೆಸ್ಸಿನವರಿಗೆ ಇಷ್ಟವಿಲ್ಲ. ಅಲ್ಲಿ ಬಾಬರಿ ಮಸೀದಿ ಇರಬೇಕಿತ್ತು. ಆದ್ದರಿಂದ ಹುಬ್ಬಳಿಯಲ್ಲಿ 31ವರ್ಷದ ನಂತರ ಕರ ಸೇವಕರನ್ನು ಬಂಧಿಸಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.

ಬುಧವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ದ್ವೇಷದ ರಾಜಕಾರಣ ಮಾಡುತ್ತಿದೆ ಹಾಗೂ ರಾಜ್ಯದಲ್ಲಿ ಗಲಭೆ ಸೃಷ್ಟಿ ಮಾಡಲು ಕಾಂಗ್ರೆಸ್ ಕಾರಣವಾಗುತ್ತಿದೆ ಎಂದು ಹೇಳಿದರು.

ರಾಮ ಮಂದಿರ ಉದ್ಘಾಟನೆ ಆಗಲು ಕೆಲವೇ ದಿನಗಳು ಇರುವಾಗ ರಾಮಭಕ್ತರನ್ನು ಬೆದರಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ.ಹಿಂದೂ ಕಾರ್ಯಕರ್ತರು ಹೆದರುವ ಅವಶ್ಯಕತೆ ಇಲ್ಲ. ನಾವು ನಿಮ್ಮ ಜೊತೆ ಇದ್ದೇವೆ. ಯಾರು ಮಂತ್ರಾಕ್ಷತೆ ತೆಗೆದುಕೊಂಡವರು ಧೈರ್ಯವಾಗಿ ಪೂಜೆ ಮಾಡಿ ಎಂದು ಅಶೋಕ್ ಕರೆ ನೀಡಿದರು.

ಕರಸೇವಕರ ಮೇಲೆ ಹಾಕಿದ ಪ್ರಕರಣಗಳಿಗೆ ಯಾವುದೇ ಸಾಕ್ಷ್ಯ ಇಲ್ಲ. ಸಿದ್ದರಾಮಯ್ಯನವರು ಬಿಜೆಪಿಗರಿಗೆ ಕಾನೂನು ಗೊತ್ತಿದೆಯೇ ಎಂದು ಕೇಳುತ್ತಾರೆ. ಆದರೆ ಅವರಿಗೆ ಕಾನೂನು ಗೊತ್ತಿದೆಯೇ? (3ನೇ ಪುಟಕ್ಕೆ)

# ಅಲ್ಪಸಂಖ್ಯಾತರ ಅತಿ ಓಲೈಕೆಯೇ ಕಾಂಗ್ರೆಸ್‌ಗೆ ಮುಳುವಾಗಲಿದೆ

ದಾವಣಗೆರೆ, ಜ.3- ಕಾಂಗ್ರೆಸ್‌ನವರು ಹಿಂದುಳಿದವರು, ದಲಿತರು, ಮುಸ್ಲಿಮರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಚುನಾವಣೆಗಾಗಿ ಮಾತ್ರ ನಮ್ಮನ್ನು ಬಳಸಿಕೊಳ್ಳಲಾಗುತ್ತದೆ ಎಂದು ಹಿಂದುಳಿದವರು, ದಲಿತರು ಕಾಂಗ್ರೆಸ್‌ನಿಂದ ದೂರವಾಗಿದ್ದಾರೆ. ಈಗ ಉಳಿದವರು ಮುಸ್ಲಿಮರು ಮಾತ್ರ. ಅವರನ್ನೇ ಬಂಡವಾಳ ಮಾಡಿಕೊಂಡು ಚುನಾವಣೆಗೆ ಹೊರಟಿದ್ದಾರೆ. ಮುಂದೆ ಇದು ಕಾಂಗ್ರೆಸ್‌ನವರಿಗೇ ಮುಳುವಾಗುತ್ತದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದ ಹೊರ ವಲಯದ (3ನೇ ಪುಟಕ್ಕೆ)

**ಮಾಜಿ ಪ್ರಧಾನಿ ರಾಜೀವ್ ಗಾಂಧಿ, ಪಿ.ವಿ. ನರಸಿಂಹರಾವ್ ಅವರೂ ಸಹ ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೆ ಸಹಕಾರ ನೀಡಿದ್ದರು : ಕೆ.ಎಸ್. ಈಶ್ವರಪ್ಪ**



# ನಿಗದಿತ ದರಕ್ಕಿಂತ ಹೆಚ್ಚು ವಸೂಲಿ ಬೇಡ



**ಕೇಬಲ್ ಆಪರೇಟರ್‌ಗಳಿಗೆ ಜಿಲ್ಲಾಧಿಕಾರಿ ನಿರ್ದೇಶನ**

ದಾವಣಗೆರೆ, ಜ. 3- ಕೇಬಲ್ ಟೆಲಿವಿಷನ್ ನೆಟ್ ವರ್ಕ್ ಕಾಯ್ದೆಯಡಿ ವಾಹಿನಿಗಳು ಕಾರ್ಯಕ್ರಮ ಮತ್ತು ಜಾಹೀರಾತು ಸಂಹಿತೆಯನ್ನು ಪಾಲನೆ ಮಾಡಬೇಕು. ಕೇಬಲ ಆಪರೇಟರ್‌ಗಳು ನಿಗದಿತ ದರಕ್ಕಿಂತ ಹೆಚ್ಚು ವಸೂಲು ಮಾಡಬಾರದು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ನಿರ್ದೇಶಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಕೇಬಲ್ ಟೆಲಿವಿಷನ್ ಆಕ್ಟ್ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಹಾಗೂ ನಿರ್ವಹಣಾಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸ್ಯಾತಲೈಟ್ ಮೂಲಕ ಸಿಗ್ನಲ್ ಗಳನ್ನು ರಸೀವರ್ ಮೂಲಕ ಪಡೆದ ಮರು ಪ್ರಸಾರ ಮಾಡುವವರನ್ನು ಕೇಬಲ್ ಆಪರೇಟರ್ ಗಳೆಂದು ಕರೆಯಲಾಗುತ್ತದೆ. ಅಧಿಕೃತ ಕೇಬಲ್ ಆಪರೇಟರ್‌ಗಳು ಜಿಲ್ಲಾಮಟ್ಟದ ಪ್ರಧಾನ ಅಂಚೆ ಕಚೇರಿಯಲ್ಲಿ ನೋಂದಣಿ ಮಾಡಿಸಿ ಕೇಬಲ್ ಆಪರೇಟರ್ ಲೈಸೆನ್ಸ್ ಪಡೆಯುವುದು ಕಡ್ಡಾಯವಾಗಿದೆ ಎಂದರು.

ಟಿವಿ ಚಾನಲ್‌ಗಳು ಕಾರ್ಯಕ್ರಮ ಮತ್ತು ಜಾಹೀರಾತು ಸಂಹಿತೆಯನ್ನು ಸ್ವಯಂ ಕಾಪಾಡಿಕೊಳ್ಳಬೇಕು. ಆಕ್ಷೇಪಾರ್ಹ ಪದ ಬಳಕೆ. ದೃಶ್ಯ ಪ್ರಸಾರವನ್ನು ಮಾಡಬಾರದು. ಜನರನ್ನು ಪ್ರಚೋದನೆಗೆ ಗುರು ಮಾಡುವ ಮತ್ತು ಹಿಂಸೆಗೆ ಪ್ರಚೋದನಕಾರಿಯಾದ ಯಾವುದೇ ದೃಶ್ಯವಾಗಲಿ ಮತ್ತು ಹೇಳಿಕೆಯನ್ನು ಪ್ರಸಾರ ಮಾಡಬಾರದು ಎಂದು ಹೇಳಿದರು.

ಲಿಂಗತಾರತಮ್ಯವಿಲ್ಲದೆ ಮಹಿಳೆಯರು, ಮಕ್ಕಳ ಮೇಲೆ ಪರಿಣಾಮ ಬೀರು ಕಾರ್ಯಕ್ರಮಗಳನ್ನು ಪ್ರಸಾರ ಮಾಡದಿರುವ ಬಗ್ಗೆ ಸ್ವಯಂ ನಿಯಂತ್ರಣ ಮಾಡಿಕೊಳ್ಳಬೇಕು. ಯಾವುದೇ ಕಾರ್ಯಕ್ರಮ ಮತ್ತು ಜಾಹೀರಾತು ಸಂಹಿತೆ ಉಲ್ಲಂಘನೆ ಮಾಡಿರುವುದು ಕಂಡು ಬಂದಲ್ಲಿ ಸಾರ್ವಜನಿಕರು ಈ ಸಮಿತಿಗೆ ದೂರು ನೀಡಲು ಮುಕ್ತ ಅವಕಾಶ ಇರುತ್ತದೆ. ದೂರನ್ನು ಜಿಲ್ಲಾಧಿಕಾರಿಗಳ ಕಚೇರಿಗೆ, ಜಿಲ್ಲಾ ರಕ್ಷಣಾಧಿಕಾರಿಗಳ ಕಚೇರಿಗೆ ಅಥವಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ನೀಡಬಹುದಾಗಿದೆ ಎಂದು ತಿಳಿಸಿದರು.

**ಗುಣಮಟ್ಟದ ಸೇವೆ:** (3ನೇ ಪುಟಕ್ಕೆ)

# ಕೋರ್ಟ್ ಎದುರು ಅಧಿಕಾರಿಗಳ ಕರೆಸುವ ಬಗ್ಗೆ ಮಾರ್ಗಸೂಚಿ

ನವದೆಹಲಿ, ಜ. 3 – ಸೂಕ್ತ ಕಾರಣವಿಲ್ಲದೇ ಅಧಿಕಾರಿಗಳು ನ್ಯಾಯಾಲಯದ ಎದುರು ಖುದ್ದು ಹಾಜರಾಗಲು ತಿಳಿಸಬಾರದು ಎಂದಿರುವ ಸುಪ್ರೀಂ ಕೋರ್ಟ್, ಅಧಿಕಾರಿಗಳನ್ನು ಕರೆಸುವ ಬಗ್ಗೆ ಮಾರ್ಗಸೂಚಿಯೊಂದನ್ನು ಪ್ರಕಟಿಸಿದೆ.

ಕಾನೂನು ಅಧಿಕಾರಿಗಳ ಹಾಜರಾತಿಯನ್ನು ಅವಲಂಬಿಸುವ ಬದಲು ಪದೇ ಪದೇ ಅಧಿಕಾರಿಗಳನ್ನು ಕರೆಸುವುದು ಸಂವಿಧಾನದ ಪರಿಕಲ್ಪನೆಗೆ ವಿರುದ್ಧವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸೀಮಿತ ಸಂದರ್ಭಗಳಲ್ಲಿ ಮಾತ್ರ ಅಧಿಕಾರಿಗಳನ್ನು ಕರೆಸಬೇಕು. ಅಧಿಕಾರಿಗಳನ್ನು ಕರೆಸುವುದನ್ನು ಸರ್ಕಾರದ ಮೇಲಿನ ಒತ್ತಡವಾಗಿ ಬಳಸಬಾರದು ಎಂದು ಮುಖ್ಯ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಹೇಳಿದೆ.

ಶ್ರೀ ವಿನಾಯಕ ಸ್ವಾಮಿಯ ಕಡೇಕಾರ್ತಿಕ ಮಹೋತ್ಸವ




ದಿನಾಂಕ: 04-01-2024ನೇ ಗುರುವಾರ
ರಾತ್ರಿ 9-30ಕ್ಕೆ
ಶ್ರೀ ವಿನಾಯಕ ಸ್ವಾಮಿಯ ಕಡೇಕಾರ್ತಿಕ ಮಹೋತ್ಸವವನ್ನು ಏರ್ಪಡಿಸಲಾಗಿದೆ.
ಸರ್ವ ಭಕ್ತಾದಿಗಳು ಭಾಗವಹಿಸಿ
ಶ್ರೀ ಸ್ವಾಮಿಯ ಕೃಪೆಗೆ
ಪಾತ್ರರಾಗಬೇಕಾಗಿ ವಿನಂತಿ.
asianpaints
BMS
ಶ್ರೀ ವಿನಾಯಕ ದೇವಸ್ಥಾನದ ಸೇವಾ ಸಂಘ ಟ್ರಸ್ಟ್ (ರಿ.)
ದೊಡ್ಡಪೇಟೆ, ದಾವಣಗೆರೆ.
ಟ್ರಸ್ಟ್ ಪರವಾಗಿ ಸರ್ವರಿಗೂ ಸ್ವಾಗತ ಬಯಸುವವರು:
ಬಿ.ಮುರಿಗೆಪ್ಪ ಸಿದ್ಧರಾಮಪ್ಪ
ಮಂಡಿಪೇಟೆ, ದಾವಣಗೆರೆ.

# ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಿ



**ಪಿಡಿಒಗಳಿಗೆ ಶಾಸಕಿ ಲತಾ ಮಲ್ಲಿಕಾರ್ಜುನ್ ತಾಕೀತು**

ಹರಪನಹಳ್ಳಿ, ಜ.3- ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನಾದ್ಯಾಂತ ಯಾವ ಗ್ರಾಮಗಳಲ್ಲಿಯೂ ಸಹ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕು ಎಂದು ಹರಪನಹಳ್ಳಿ ಶಾಸಕಿ ಎಂ ಪಿ ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ತಾ.ಪಂ. ಆವರಣದ ರಾಜೀವ್ ಗಾಂಧಿ ಸಭಾಂಗಣದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿಯೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಕುಡಿಯುವ ನೀರಿಗಾಗಿ ಮೀಸಲಿಟ್ಟಿರುವ ಹಣದ ಮಾಹಿತಿಯನ್ನು ಪಡೆದು ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಯಾವ ರೀತಿಯ ತೊಂದರೆಯೂ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದರಲ್ಲದೇ ಪ್ರತಿಯೊಂದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿಗಾಗಿ ಖಾಸಗಿ ವ್ಯಕ್ತಿಗಳ ಜೊತೆ ಒಡಂಬಡಿಕೆ ಅಥವಾ ಒಪ್ಪಂದ ಮಾಡಿಕೊಂಡು ಅದರ ಖಾಯಂಗೊಳಿಸಿ ಕುಡಿಯುವ ನೀರಿಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಕೆಲವು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು ನಿಮ್ಮ ಮೇಲೆ ಅನೇಕ ದೂರುಗಳು ಬರುತ್ತವೆ ಅವುಗಳನ್ನು ಪರಿಹರಿಸಿ ಶಾಸಕರ ದೂರವಾಣಿ ಕರೆಗಳನ್ನು ಸ್ವೀಕರಿಸಿ ಮಾತನಾಡಿ , ಜನರು ಕುಡಿಯಲು ನೀರಿಲ್ಲ ಎಂದು ನಮ್ಮ ಬಳಿ ಬಂದರೆ ನಿಮ್ಮ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು ನನಗೆ ಕೊಡಿ ಜನರನ್ನು ನೇರವಾಗಿ ನಿಮ್ಮ ಬಳಿಯೇ ಕಳಿಸುತ್ತೇನೆ ಎಂದ ಅವರು, ಲಕ್ಷ್ಮಿಪುರ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯದಲ್ಲಿ ಅತ್ಯುತ್ತಮ ಪಂಚಾಯಿತಿ ಎಂದು ಅವಾರ್ಡ್ ಪಡೆದಿರುವ ತಮ್ಮ ಪಂಚಾಯ್ತಿ ಅದರ ಕೆಲಸದಲ್ಲಿಯೂ ಅದನ್ನು ಸಾಬೀತುಪಡಿಸಿ ತೋರಿಸಿ ಎಂದರು.

ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಕುಂದುಕೊರತೆಗಳಾಗದಂತೆ ಪ್ರತಿಯೊಬ್ಬ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ಮಳೆಗಾಲ ಬರುವವರೆಗೂ ಎಚ್ಚರದಿಂದ ಕಾರ್ಯನಿರ್ವಹಿಸಿ ಎಂದರು .

ತಾಲ್ಲೂಕು ಆರೋಗ್ಯ ಅಧಿಕಾರಿ ಹಾಗೂ ಹರಪನಹಳ್ಳಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಗಳನ್ನು ಮಾತನಾಡಿಸಿದ ಅವರು ಆಸ್ಪತ್ರೆಯಲ್ಲಿ ವೈದ್ಯರು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ ಎಂದು ಜನರು ದೂರುತ್ತಿದ್ದಾರೆ ಅಲ್ಲದೆ ದಾದಿಯರು ಸಹ (3ನೇ ಪುಟಕ್ಕೆ)

# ಗದ್ದುಗೆಗೆ ಅಡ್ಡಿಯಾಗುವವರಿಗೆ ಲೋಕಸಭಾ ಕಣ : ಡಿಕೆಶಿ ತಂತ್ರ

ಬೆಂಗಳೂರು, ಜ. 3 - ಅಧಿಕಾರದ ಗದ್ದುಗೆ ಹಿಡಿಯಲು ಅಡ್ಡಿಯಾಗುತ್ತಾರೆನ್ನುವ ಸಚಿವ, ಶಾಸಕರನ್ನು ಲೋಕಸಭಾ ಚುನಾವಣಾ ಕಣಕ್ಕಿಳಿಸಲು ಕಾಂಗ್ರೆಸ್ ರಾಜ್ಯಾಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಾಗಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಮುಂಬರುವ ಲೋಕಸಭಾ ಚುನಾವಣಾ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಕರ್ನಾಟಕದ 28 ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಹಾಗೂ ಚುನಾವಣಾ ತಂತ್ರಗಾರಿಕೆ ಸೇರಿದಂತೆ ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರಿಗೆ ವರಿಷ್ಠರು ಬುಲಾವ್ ಮಾಡಿದ್ದಾರೆ.

ವರಿಷ್ಠರ ಆಹ್ವಾನದ ಮೇರೆಗೆ ದೆಹಲಿಗೆ ತೆರಳಿರುವ ಉಭಯ ನಾಯಕರು ನಾಳೆ 28 ಕ್ಷೇತ್ರಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಘಟಕ, ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಹಾಗೂ ಚುನಾವಣಾ ಪೂರ್ವ ಸಮೀಕ್ಷೆ ಆಧಾರದ ಮೇಲೆ ಪ್ರತಿ ಕ್ಷೇತ್ರಕ್ಕೆ ಸಂಭವನೀಯ ಮೂರು ಹೆಸರುಗಳನ್ನು ಪಟ್ಟಿ ಮಾಡಿದ್ದು ಅದನ್ನು ನಾಳೆ ವರಿಷ್ಠರಿಗೆ ಸಲ್ಲಿಸಿ ಚರ್ಚೆ ನಡೆಸಲಿದ್ದಾರೆ.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರು ಸಿದ್ಧಪಡಿಸಿರುವ ಪಟ್ಟಿಯಲ್ಲಿ 20 ಕ್ಷೇತ್ರಗಳಿಗೆ ಒಮ್ಮತ ಮತ್ತು ಸಮ್ಮತದ ಅಭ್ಯರ್ಥಿಗಳಿದ್ದರೆ, ಉಳಿದ 8 ಕ್ಷೇತ್ರಗಳಿಗೆ ಪ್ರತ್ಯೇಕ ಪಟ್ಟಿಯನ್ನು ಇಡುತ್ತಿದ್ದಾರೆ.

ಶಿವಕುಮಾರ್ ಅವರು, ಸಚಿವರು ಮತ್ತು ಶಾಸಕರನ್ನು ನಿರ್ದಿಷ್ಟ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದರೆ ಗೆಲುವು ಸಾಧ್ಯ ಎಂಬ ಅಂಕಿ-ಅಂಶಗಳನ್ನು ಮುಂದಿಟ್ಟುಕೊಂಡು ವರಿಷ್ಠರ ಮುಂದೆ ತಮ್ಮ ವಾದ ಮಂಡಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್ ಅಲ್ಲದೆ, ಇತರೆ ಮುಖಂಡರು ಭಾಗವಹಿಸಲಿರುವ ಸಭೆಯಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಪ್ರತಿ ಕ್ಷೇತ್ರದ ಬಗ್ಗೆ ಮಾಹಿತಿ ಮತ್ತು ಅಭ್ಯರ್ಥಿ ಗೆಲುವಿಗೆ ಯಾವ ಮಾನದಂಡಗಳನ್ನು ಅನುಸರಿಸಬೇಕು ಎಂಬ ಬಗ್ಗೆ ವಿವರಿಸಲಿದ್ದಾರೆ.

ಅಧಿಕಾರ ಹಂಚಿಕೆ ಸೂತ್ರದಂತೆ ಸಿದ್ದರಾಮಯ್ಯ ಅವರು ಎರಡು ವರ್ಷಗಳ ಅವಧಿ ಪೂರ್ಣಗೊಳಿಸಿದ ನಂತರ ಉಪಮುಖ್ಯಮಂತ್ರಿ ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಬೇಕು ಎನ್ನಲಾಗುತ್ತಿದೆ.



ಅಧಿಕಾರ ಹಸ್ತಾಂತರಕ್ಕೆ ಸಮಯ ಇನ್ನೂ ದೂರವಿದ್ದರೂ ಮುಖ್ಯಮಂತ್ರಿ ಅವರ ಆಪ್ತರು ಈಗಿನಿಂದಲೇ ಕ್ಯಾತೆ ತೆಗೆದು ಉಪ ಮುಖ್ಯಮಂತ್ರಿ ಅವರಿಗೆ ದೊರೆಯಬಹುದಾದ ಬಡ್ತಿಗೆ ಅಡ್ಡಗಾಲು ಹಾಕಿದ್ದಾರೆ.

ತಮಗೆ ಅಧಿಕಾರ ತಪ್ಪಿಸಲು ಸಂಚು ನಡೆಸುತ್ತಿರುವವರನ್ನೇ ಲೋಕಸಭಾ ಚುನಾವಣಾ ಕಣಕ್ಕೆ ಇಳಿಸಿದರೆ ತಮ್ಮ ಮುಂದಿನ ಹಾದಿ ಸುಗಮ ಎಂಬ ಉದ್ದೇಶದಿಂದ ಶಿವಕುಮಾರ್ ಅವರು, ಬೆಳಗಾವಿ, ತುಮಕೂರು, ಕೊಪ್ಪಳ, ಬಾಗಲಕೋಟೆ, ರಾಯಚೂರು, ಬೆಂಗಳೂರು ಕೇಂದ್ರ ಸೇರಿದಂತೆ ಎಂಟು ಕ್ಷೇತ್ರಗಳಲ್ಲಿ ಸಚಿವರು, ಶಾಸಕರನ್ನು ಕಣಕ್ಕಿಳಿಸಲು ತಂತ್ರಗಾರಿಕೆ ರೂಪಿಸಿ ವರಿಷ್ಠರ ಮೂಲಕ ಒತ್ತಡ ತರುವ ಯತ್ನ ಮಾಡಿದ್ದಾರೆ.

ಶಿವಕುಮಾರ್ ಅವರ ಈ ತಂತ್ರಕ್ಕೆ ಸಿದ್ದರಾಮಯ್ಯ ವಿರೋಧವಿದ್ದು, ಅಷ್ಟೇ ಅಲ್ಲದೆ, ತಮ್ಮ ಬೆಂಬಲಿಗ ಶಾಸಕರನ್ನು ಕಣಕ್ಕಿ ಳಿಸಲು ಆಸಕ್ತಿ ತೋರುತ್ತಿಲ್ಲ ಎನ್ನಲಾಗುತ್ತಿದೆ.

ಉಭಯ ನಾಯಕರು ನಾಳೆ ತಮ್ಮ ವಾದವನ್ನು ವರಿಷ್ಠರ ಮುಂದೆ ಮಂಡಿಸಲಿದ್ದಾರೆ, ಅಂತಿಮ ನಿರ್ಧಾರವನ್ನು ಎಐಸಿಸಿ ತೆಗೆದುಕೊಳ್ಳಬೇಕಿದೆ.

ರಾಜ್ಯ ನಾಯಕರು ನೀಡಿರುವ ಸಂಭವ ನೀಯ ಪಟ್ಟಿಯನ್ನು ಮುಂದಿಟ್ಟುಕೊಂಡು ಎಐಸಿಸಿ ಮತ್ತೆ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿ ಈ ತಿಂಗಳ ಮೂರನೇ ವಾರದ ವೇಳೆಗೆ ರಾಜ್ಯದ 15 ಕ್ಷೇತ್ರಗಳಿಗೆ ಮೊದಲ ಪಟ್ಟಿಯಲ್ಲಿ ಹೆಸರು ಪ್ರಕಟಿಸಲಿದೆ.

ರಾಷ್ಟ್ರದ 252 ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳನ್ನು ಎಐಸಿಸಿ ಪ್ರಕಟಿಸಲಿದ್ದು ಆ ಪಟ್ಟಿಯಲ್ಲಿ ಕರ್ನಾಟಕದ ಈ ಕ್ಷೇತ್ರಗಳು ಸೇರಿರಲಿವೆ.

# ಪುಲ್ವಾಮಾ ಬಿಜೆಪಿಯ ಗಿಮಿಕ್

## ಗೋಧ್ರಾ ಪ್ರಕರಣದ ರಾಜಕೀಯ ಲಾಭ ಪಡೆದಿದ್ದಾರೆ



ದಾವಣಗೆರೆ, ಜ. 3 – ಪುಲ್ವಾಮಾ ದಾಳಿ ಬಿಜೆಪಿಯ ಗಿಮಿಕ್ (ಪ್ರಚಾರ ತಂತ್ರ). ಪ್ರತಿ ಬಾರಿ ಚುನಾವಣೆ ಬಂದಾಗ ಬಿಜೆಪಿಯವರು ಏನಾದರೂ ಚುನಾವಣಾ ಗಿಮಿಕ್ ಮಾಡುತ್ತಾರೆ ಎಂದು ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ಇಲ್ಲಿಗೆ ಸಮೀಪದ ರುದ್ರನಕಟ್ಟೆಗೆ ಆಗಮಿಸಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಪ್ರತಿ ಬಾರಿ ಚುನಾವಣಾ ಸಮಯದಲ್ಲಿ ಯಾವುದೇ ಕೆಳಮಟ್ಟಕ್ಕೆ ಇಳಿಯಲು ಹೇಸುವುದಿಲ್ಲ. ಕಳೆದ ಬಾರಿ ಪುಲ್ವಾಮಾ ದಾಳಿ ಬಳಸಿದ್ದರು. ಗೋಧ್ರಾ ಹತ್ಯಾಕಾಂಡದ ಲಾಭವನ್ನು 2014ರವರೆಗೆ ಪಡೆದಿದ್ದರು ಎಂದರು. ಗೋಧ್ರಾ ದುರಂತದ ರೀತಿ ಮತ್ತೇನಾದರೂ ಆಗಬಹುದು. ಅಯೋಧ್ಯೆಗೆ ಹೋಗುವವರಿಗೆ ಸರ್ಕಾರವೇ ರಕ್ಷಣೆ ಕೊಡಬೇಕು ಎಂದು ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ನೀಡಿರುವ ಹೇಳಿಕೆ ಕುರಿತ ಪ್ರಶ್ನೆಗೆ ಯತೀಂದ್ರ ಈ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರತಿ ಬಾರಿ ಬಿಜೆಪಿ ಗಿಮಿಕ್ ಮಾಡುತ್ತಿರುವುದನ್ನು ನೋಡಿ ಹರಿಪ್ರಸಾದ್ ಹೇಳಿಕೆ ನೀಡಿರಬಹುದು. ರಾಮ ಮಂದಿರ ಎಲ್ಲ ಹಿಂದೂಗಳಿಗೆ ಸೇರಿದ್ದು. ಆದರೆ, ಮಂದಿರವನ್ನು ಬಿಜೆಪಿ ಪಕ್ಷದ ಕಾರ್ಯಕ್ರಮದಂತೆ ನಿರ್ವಹಿಸುತ್ತಿದೆ ಎಂದು ಯತೀಂದ್ರ ಹೇಳಿದರು. ರಾಮ ಮಂದಿರ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡದೇ ಇರುವ ಬಗ್ಗೆ ಪ್ರತಿಕ್ರಿಸಿದ ಅವರು, ಬಿಜೆಪಿಯವರು ತಮ್ಮ ರಾಜಕೀಯ ಅನುಕೂಲಕ್ಕೆ ಬೇಕಾದವರನ್ನು ಕರೆಯುತ್ತಿದ್ದಾರೆ. ಮಂದಿರ ಉದ್ಘಾಟನೆಯನ್ನು ರಾಜಕೀಯ ಕಾರ್ಯಕ್ರಮ ಮಾಡಿಕೊಂಡಿದ್ದಾರೆ ಎಂದು ಟೀಕಿಸಿದರು.

# ಗೋಣಿವಾಡದಲ್ಲಿ ನಾಳೆ - ನಾಡಿದ್ದು 'ಸೋಮೇಶ್ವರೋತ್ಸವ'

ದಾವಣಗೆರೆ, ಜ. 3- ತಾಲ್ಲೂಕಿನ ಗೋಣಿವಾಡದಲ್ಲಿ ಸೋಮೇಶ್ವರ ವಸತಿಯುತ ವಿದ್ಯಾಲಯದ ಆವರಣದಲ್ಲಿ ನಾಡಿದ್ದು ದಿನಾಂಕ 5 ಮತ್ತು 6 ರಂದು ಎರಡು ದಿನಗಳ ಕಾಲ ಸೋಮೇಶ್ವರೋತ್ಸವ ನಡೆಯಲಿದೆ ಎಂದು ವಿದ್ಯಾಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಎನ್. ಪ್ರಭಾವತಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ಗಾಯಕ ರಾಜೇಶ್ ಕೃಷ್ಣನ್, ಎಂ.ಡಿ. ಪಲ್ಲವಿ ಅವರಿಂದ ಸಂಗೀತ ಕಾರ್ಯಕ್ರಮ**

5 ರಂದು ಸಂಜೆ 5.45 ಕ್ಕೆ ನಡೆಯುವ ಸೋಮೇಶ್ವರೋತ್ಸವ ಸಮಾರಂಭದಲ್ಲಿ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ ಕಾರ್ಯಕ್ರಮ ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಡಿಡಿಪಿಐ ಜಿ.ಕೊಟ್ರೇಶ್, ಸರ್ ಎಂವಿ ಕಾಲೇಜಿನ ಕಾರ್ಯದರ್ಶಿ ಎಸ್.ಜೆ. ಶ್ರೀಧರ್, ನಿವೃತ್ತ ಸೇನಾಧಿಕಾರಿ ಡಾ. ಹಾಲೇಶ್, ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಭಾಗವಹಿಸಲಿದ್ದಾರೆ. ಸೋಮೇಶ್ವರ ಸಿರಿ ಪ್ರಶಸ್ತಿಯನ್ನು ವಾಲ್ಮೀಕಿ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿದೇವಿ ಮತ್ತು ಬಿ. ವೀರಣ್ಣ ಅವರಿಗೆ ಪ್ರದಾನ ಮಾಡಲಾಗುವುದು.

ದಿನಾಂಕ 6 ರಂದು ಸಂಜೆ 5.45 ಕ್ಕೆ ನಡೆಯುವ ಸಮಾರಂಭವನ್ನು ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಉದ್ಘಾಟಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಎಸ್. ಬಸವಂತಪ್ಪ, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎಂ.ಜೆ.ಬಿ. ಮುರುಗೇಶ್ ಆರಾಧ್ಯ, ಉಮೇಶ್ ಶೆಟ್ಟಿ, ಟಿ.ಕೆ. ವೀರಪ್ಪ ಮತ್ತಿತರರು ಆಗಮಿಸಲಿದ್ದಾರೆ.

ವಿದ್ಯಾಲಯದ ಅಧ್ಯಕ್ಷ ಹೆಚ್.ಆರ್. ಅಶೋಕ್ ರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 99.4 ರಷ್ಟು ಅಂಕ ಪಡೆದ ಶಾಲಾ ವಿದ್ಯಾರ್ಥಿನಿ ಕೆ.ಎಸ್. ಕ್ರೀನಾ ಅವರಿಗೆ 'ಸಾಧನ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್, ಎಂ.ಡಿ. ಪಲ್ಲವಿ ಅವರಿಂದ ಸಂಗೀತ ಕಾರ್ಯಕ್ರಮವಿದೆ.

ಸುದ್ದಿಗೋಷ್ಠಿಯಲ್ಲಿ ಆಡಳಿತಾಧಿಕಾರಿ ಎನ್.ಆರ್. ಹರೀಶ್, ಮುಖ್ಯ ಶಿಕ್ಷಕ ಪಿ. ಮಾಲಾ ಉಪಸ್ಥಿತರಿದ್ದರು.

# ಮಕ್ಕಳು ಸುಸಂಸ್ಕೃತರಾಗಿ ಕುಟುಂಬದ ಘನತೆ ಹೆಚ್ಚಿಸಬೇಕು : ವಿಶ್ವೇಶ್ವರಿ ಹಿರೇಮಠ




**ರಾಣೇಬೆನ್ನೂರು**

ರಾಣೇಬೆನ್ನೂರು, ಜ.3- 'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು' ಎನ್ನುವ ಉಕ್ತಿಯಂತೆ ನಮ್ಮ ಮಕ್ಕಳು ಸಂಸ್ಕಾರಯುತ ವ್ಯಕ್ತಿತ್ವವನ್ನು ಹೊಂದಿ ಕುಟುಂಬದ ಘನತೆಯನ್ನು ಹೆಚ್ಚಿಸಬೇಕು ಎಂದು ಧಾರವಾಡ ಜಾನಪದ ಸಂಶೋಧನಾ ಕೇಂದ್ರದ ಅಧ್ಯಕ್ಷರೂ ಆಗಿರುವ ರಂಗ ನಿರ್ದೇಶಕರಾದ ಶ್ರೀಮತಿ ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ ಕಿವಿಮಾತು ಹೇಳಿದರು.

ನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ 21ನೇ ವಾರ್ಷಿಕೋತ್ಸವ 'ಸಂವರ್ಧಿನಿ' ಸಮಾ ರಂಭದಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಜೀವನದ ಮೌಲ್ಯಗಳಿಂದ, ಸದ್ಗುಣಗಳಿಂದ ಮಾತ್ರ ಸಚ್ಚಾರಿತ್ರ್ಯ ಬೆಳೆದು ಬರುತ್ತದೆ. ತಮ್ಮ ಪ್ರಾಮಾಣಿಕತೆಯನ್ನು ಜೀವನದುದ್ದಕ್ಕೂ ಅಳವಡಿಸಿಕೊಳ್ಳಬೇಕು ಎಂದು ಅವರು ಮಕ್ಕಳು ಹಾಗೂ ಪಾಲಕರಿಗೆ ತಿಳಿ ಹೇಳಿದರು.

ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ತುಳಜಪ್ಪ ವಿ. ಲದ್ವಾ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲೆಯು ಬೆಳೆದು ಬಂದ ದಾರಿ ಮತ್ತು ಅಂದುಕೊಂಡಂತೆ ಕಾರ್ಯ ಸಾಧನೆಯಾಗಿರುವುದನ್ನು ತಿಳಿಸುವುದರ ಮೂಲಕ ಮಕ್ಕಳಿಗೆ ಭವಿಷ್ಯವನ್ನು ರೂಪಿಸುವ ಸಲುವಾಗಿ ಮುಂದಿನ ದಿನಮಾನಗಳಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಆಸೆಯನ್ನು ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯಲ್ಲಿ ನಡೆದಂತಹ ಕ್ರೀಡೆ, ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕಳೆದ ವರ್ಷದ ಸಿ.ಬಿ.ಎಸ್.ಇ 10ನೇ ವರ್ಗದ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳನ್ನು ಸನ್ಮಾನಿಸಲಾಯಿತು ಹಾಗೂ ಪರೀಕ್ಷಾ ಪೆ ಚರ್ಚೆಯಲ್ಲಿ ಭಾಗವಹಿಸಿ, ಉತ್ತಮ ಸಾಧನೆ ಮಾಡಿದಂತಹ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ವಾಸುದೇವಸಾ ಪಿ ಲದ್ವಾ ಅವರು 'ಸಂವರ್ಧಿನಿ' ಅರ್ಥ ಹಾಗೂ ಮಹತ್ವವನ್ನು ವಿವರಿಸುತ್ತಾ, ಮಕ್ಕಳಿಗೆ ಸತ್ಕಾರ, ಸತ್ ಚಾರಿತ್ರ್ಯ ಸಂಸ್ಕೃತಿ ಕಲಿಸುವುದರ ಜೊತೆಗೆ ಜ್ಞಾನದ ಸಿಹಿಯನ್ನು ಉಣಬಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲಾ ನಾಳೆ ಫಲ ಕೊಡುವುದು ಎಂಬ ಉಕ್ತಿಯಂತೆ ಕಾರ್ಯವನ್ನು ಮಾಡುತ್ತಿರುವ ನಮ್ಮ ಶಾಲೆಯ ಪಾಲಕರು, ಶಿಕ್ಷಕರು ಹಾಗೂ ಆಡಳಿತ ಮಂಡಳಿಯ ಸದಸ್ಯರುಗಳು ನೀಡಿದ ಸಹಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಆಡಳಿತ ಮಂಡಳಿ ನಿರ್ದೇಶಕರುಗಳಾದ, ಡಾ. ಎಂ.ಎಂ.ಅನಂತರೆಡ್ಡಿ, ಡಾ. ಬಿ.ಆರ್. ಸಾವಕಾರ, ಶ್ರೀಮತಿ ವಜ್ರೇಶ್ವರಿ ವಿ. ಲದ್ವಾ, ಮಲ್ಲಿಕಾರ್ಜುನ ಅಂಗಡಿ, ವಿನೋದ ಕಲಬುರ್ಗಿ, ಕಾಶಿನಾಥ ಪವಾರ, ಶ್ರೀಮತಿ ಅನ್ನಪೂರ್ಣ ಕಬಾಡಿ, ಪರಶುರಾಮ ಕಬಾಡಿ, ಪ್ರಾಚಾರ್ಯ ಪ್ರಕಾಶ ಎಸ್, ಹಂಸಬಾವಿ ಶಾಲೆಯ ಪ್ರಾಚಾರ್ಯ ಕೃಷ್ಣ ಕಬ್ಬೂರ, ಹಲಗೇರಿ ಸಾಯಿ ಪಬ್ಲಿಕ್ ಶಾಲೆಯ ಪ್ರಾಚಾರ್ಯ ಇಸ್ಮಾಯಿಲ್ ಜಬಿಉಲ್ಲಾ ಉಪಸ್ಥಿತರಿದ್ದರು.

ಸರಸ್ವತಿ ಪ್ರಾರ್ಥನೆ, ಶ್ರೀಮತಿ ಫರೀನಾ ನಾಜ್ ಸ್ವಾಗತ. ಪ್ರಾಚಾರ್ಯ ಪ್ರಕಾಶ ಎಸ್. ವಾರ್ಷಿಕ ವರದಿ ವಾಚನ, ನಿರೂಪಣೆಯನ್ನು ಬಿಂದು ಪಾಟೀಲ್ ಮತ್ತು ನೂರ್ ಇ. ರಹಮತ್ ನಿರ್ವಹಿಸಿದರು. ದಿಗಂತ್ ಹೆಚ್. ಸಿ ವಂದಿಸಿದರು.

# ಜೈನ್ ಕಾಲೇಜಿನಲ್ಲಿ ಪ್ರಧಾನ ಮಂತ್ರಿ ಕೌಶಲ್ಯ ಕೇಂದ್ರ ಪ್ರಾರಂಭ

ದಾವಣಗೆರೆ, ಜ. 3- ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ರೋಮನ್ ಟೆಕ್ನಾಲಜಿಸ್ (ಬೆಂಗಳೂರು) ಇವರ ವತಿಯಿಂದ ಪ್ರಧಾನ ಮಂತ್ರಿ ಕೌಶಲ್ಯ ಕೇಂದ್ರವನ್ನು ಜೈನ್ ಕಾಲೇಜಿನಲ್ಲಿ ಸ್ಥಾಪಿಸಲಾಗಿದೆ ಎಂದು ರೋಮನ್ ಟೆಕ್ನಾಲಜೀಸ್ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವು ದೆಹಲಿಯಿಂದ ಜಾರಿಗೊಳಿಸಲಾದ ಕೌಶಲ್ಯ ಅಭಿವೃದ್ಧಿ ಮತ್ತು ವಾಣಿಜ್ಯೋದ್ಯಮ ಸಚಿವಾಲಯದ ಪ್ರಮುಖ ಯೋಜನೆಯಾಗಿದೆ ಎಂದರು.

ಯೋಜನೆಯ ಮೂಲಕ ಯುವಕರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹೆಚ್ಚಿನ ಉದ್ಯೋಗಾವಕಾಶವನ್ನು ಪಡೆಯುತ್ತಾರೆ. ಪರಿಣಾಮಕಾರಿ ಔದ್ಯಮಿಕ ಆಧಾರಿತ ತರಬೇತಿಯನ್ನು ನೀಡಿದ ನಂತರ ಯುವಕರ ಕೌಶಲ್ಯಗಳನ್ನು ಉನ್ನತೀಕರಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಈ ಯೋಜನೆಯ ಮೂಲಕ ದೇಶದ ಪ್ರಗತಿಗೆ ಕೆಲಸ ಮಾಡುವುದು ಸರ್ಕಾರದ ಇನ್ನೊಂದು ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ತರಬೇತಿಯ ಎಐ, ಡಾಟಾ ಸೈನ್ಸ್, ಐಒಟಿ, ಸೈಬರ್ ಸೆಕ್ಯೂರಿಟಿ, ರೋಬೋಟಿಕ್ಸ್, ಡ್ರೋಣ್ ಇತ್ಯಾದಿ ಕೋರ್ಸ್‌ಗಳ ತರಬೇತಿ ನೀಡಲಾಗುತ್ತದೆ. ಕೌಶಲ್ಯ, ಮರುಕೌಶಲ್ಯ ಮತ್ತು ಉನ್ನತಿಗಾಗಿ ಸ್ಥಾಪಿಸಲಾಗಿದೆ ಎಂದರು.

ತರಬೇತಿಯು ಇದೇ ದಿನಾಂಕ 15 ರಿಂದ ಆರಂಭವಾಗಲಿದ್ದು, ಜ. 1 ರಿಂದ ನೋಂದಣಿ ಆರಂಭವಾಗಿದೆ. ವಿದ್ಯಾರ್ಥಿ ಹೆಸರು ನೋಂದಾಯಿಸಲು 7948228880, 7760382464 ಗೆ ಸಂಪರ್ಕಿಸಬಹುದು.

ಸುದ್ದಿಗೋಷ್ಠಿಯಲ್ಲಿ ಡಿ.ಬಿ. ಗಣೇಶ್, ಡಾ. ಜಯಂತ್, ಡಾ. ಮಂಜಪ್ಪ, ಡಾ. ಶ್ರೀನಿವಾಸ್ ಇದ್ದರು.

# ಜಿಗಳಿ: ಇಂದು ಬೀರಪ್ಪನ ಕಾರ್ತಿಕ, ನಾಳೆ ದೊಡ್ಡ ಎಡೆ ಪೂಜೆ



ಜಿಗಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಇಂದು ರಾತ್ರಿ 9.30 ಕ್ಕೆ ಭಜನೆ, ಡೊಳ್ಳು ಮತ್ತು ಈರಗಾರರ ಕುಣಿತದೊಂದಿಗೆ ಜರುಗಲಿದೆ.

ನಾಳೆ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಜವಳ, 9.30 ರಿಂದ 10.30 ರವರೆಗೆ ಸಾಮೂಹಿಕ ವಿವಾಹ, ನಂತರ 11 ಗಂಟೆಗೆ ಈರಗಾರರಿಂದ ದೊಡ್ಡ ಎಡೆ ಪೂಜೆ ನಡೆಯಲಿದೆ.

ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಮತ್ತು ರಟ್ಟಿಹಳ್ಳಿ ಕಬ್ಬಿಣ ಕಂಥಿ ಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

# ಕುಷ್ಠರೋಗ ಮುಕ್ತ ಭಾರತಕ್ಕೆ ಸಂಕಲ್ಪ

## ಬೆಳ್ಳೂಡಿಯಲ್ಲಿ ಟಿಹೆಚ್‌ಓ ಡಾ.ಪ್ರಶಾಂತ್ ಕರೆ



ಮಲೇಬೆನ್ನೂರು, ಜ.3- ಬೆಳ್ಳೂಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಶಾ ಕಾರ್ಯಕರ್ತರಿಗೆ ಹಾಗೂ ಸ್ವಯಂ ಸೇವಕರಿಗೆ ಕುಷ್ಠರೋಗ ಪತ್ತೆ ಆಂದೋಲನದ ಬಗ್ಗೆ ನಿನ್ನೆ ತರಬೇತಿ ನೀಡಲಾಯಿತು.

ಈ ವೇಳೆ ಮಾತನಾಡಿದ ಟಿಹೆಚ್‌ಓ ಡಾ. ಪ್ರಶಾಂತ್ ಅವರು, ಕುಷ್ಠರೋಗ ಮುಕ್ತ ಭಾರತಕ್ಕಾಗಿ ನಾವೆಲ್ಲರೂ ಸಂಕಲ್ಪ ಮಾಡಬೇಕು. ಕುಷ್ಠರೋಗಕ್ಕೆ ಬಹುವಿಧ ಔಷಧಿ ಚಿಕಿತ್ಸೆ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಸಿಗುತ್ತದೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕೆಂದ ಡಾ. ಪ್ರಶಾಂತ್ ಅವರು, ಕುಷ್ಠ ರೋಗದ ಲಕ್ಷಣಗಳನ್ನು ತಿಳಿಸಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮಣ್ಣ ಉಪಯುಕ್ತ ಮಾಹಿತಿ ನೀಡಿದರು. ಆರೋಗ್ಯ ಸಿಬ್ಬಂದಿಗಳಾದ ಪಂಚಾಕ್ಷರಿ ಅಜಮತ್, ಶೃತಿ, ರೇಣುಕಾ, ಸ್ವಾಮಿ, ಮಂಜಮ್ಮ ಮತ್ತು ಇತರರು ಸಭೆಯಲ್ಲಿದ್ದರು.

# ಜಿಗಳಿ ಹಾಲು ಉತ್ಪಾದಕರ ಸಂಘದ ಕಟ್ಟಡ ಉದ್ಘಾಟನೆ



ಮಲೇಬೆನ್ನೂರು, ಜ. 3- ಜಿಗಳಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಮತ್ತು ಹಾಲು ಶೀಥಲೀಕರಣ ಕೇಂದ್ರದ ನೂತನ ಕಟ್ಟಡವನ್ನು ಶಾಸಕ ಬಿ.ಪಿ. ಹರೀಶ್ ಬುಧವಾರ ಉದ್ಘಾಟಿಸಿ ಶುಭ ಹಾರೈಸಿದರು.

ಕೆಎಂಎಫ್ ಅನುದಾನ 6.50 ಲಕ್ಷ ರೂ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 2 ಲಕ್ಷ ರೂ. ಹಾಗೂ ಸಂಘದ ಕಟ್ಟಡ ನಿಧಿಯಲ್ಲಿ ಈ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ.

ಶಿವಮೊಗ್ಗ ಹಾಲು ಒಕ್ಕೂಟದ ನಿರ್ದೇಶಕರಾದ ಜಗದೀಶಪ್ಪ ಬಣಕಾರ್, ಕಲಪನಹಳ್ಳಿ ಸೋಮಶೇಖರ್, ಹನುಮನಹಳ್ಳಿ ಬಸವರಾಜಪ್ಪ, ಒಕ್ಕೂಟದ ಉಪ ವ್ಯವಸ್ಥಾಪಕ ಡಾ. ಎನ್. ಗುರುರಾಜ್, ವಿಸ್ತರಣಾಧಿಕಾರಿ ಎಂ.ಸಿ.ಆನಂದಸ್ವಾಮಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಜಿಗಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಜಿಗಳಿ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಜಿ.ಎಂ. ವೀರನಗೌಡ, ಉಪಾಧ್ಯಕ್ಷೆ ಶ್ರೀಮತಿ ಹೇಮಾವತಿ, ನಿರ್ದೇಶಕರಾದ ಸಿ.ಹೆಚ್. ರಂಗನಾಥ್, ಬಿ.ಇ. ಬಸವರಾಜ್, ಎಂ.ಎಸ್. ನಿಜಗುಣ, ಬಿ.ಡಿ. ಮಹೇಶ್ವರಪ್ಪ, ಹೆಚ್.ಸಿ. ವಿಜಯ್, ಎಂ.ಎಂ. ಸಿದ್ದನಗೌಡ, ಶ್ರೀಮತಿ ರತ್ನಮ್ಮ, ಸಂಘದ ಪ್ರಭಾರ ಕಾರ್ಯನಿರ್ವಾಹಕ ಎಂ. ಶಿವಾನಂದಪ್ಪ, ಸಹಾಯಕ ಎಂ.ಎಸ್. ರುದ್ರೇಶ್, ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಕೊಟ್ರಯ್ಯ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಕಂಚಿಕೇರಿಯಲ್ಲಿ ಸಾಮೂಹಿಕ ಮದುವೆ

ಹರಪನಹಳ್ಳಿ, ಜ.3- ತಾಲ್ಲೂಕಿನ ಕಂಚಿಕೇರಿ ಗ್ರಾಮದ ಕೋಡಿಸಿದ್ದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಲಿಂ. ಬಿದ್ರಿ ರೇವಣಸಿದ್ದಪ್ಪನವರ ಸವಿನೆನಪಿಗಾಗಿ ಶ್ರೀಮತಿ ಮೀನಾಕ್ಷಮ್ಮ ಮತ್ತು ಮಗ ಸುನೀಲಕುಮಾರ್ ಬಿದ್ರಿ ಹಾಗೂ ಸಹೋದರ ಡಾ.ಕೊಟ್ರೇಶ್ ಬಿದ್ರಿ, ಶ್ರೀಮತಿ ಅನುರಾಧಮ್ಮ ಇವರು 24ನೇ ವರ್ಷದ ಸಂಪೂರ್ಣ ಉಚಿತ ಸಾಮೂಹಿಕ ವಿವಾಹಗಳನ್ನು ಬರುವ ಫೆಬ್ರವರಿ 18 ರಂದು ಭಾನುವಾರ ನೆಡೆಸಿ ಕೊಡಲಿದ್ದಾರೆ.

ಆಸಕ್ತರು ಬಿದ್ರಿ ಡಾ.ಕೊಟ್ರೇಶ್, ಅಶ್ವಿನಿ ಕ್ಲಿನಿಕ್‌ನಲ್ಲಿ ಸಂಪರ್ಕಿಸಬಹುದು. ದೂ.08398-271034, 271002 ಮೊ. 94486 54884, ಮೊ.97412 88330, 97412 11440.

# ರಾಣೇಬೆನ್ನೂರು ಗ್ರಾಮಾಂತರದಲ್ಲಿ ಇಂದಿನಿಂದ ಮೂರು ದಿನ ವಿದ್ಯುತ್ ವ್ಯತ್ಯಯ

ಗುಡುಗೂರು-ಮೈದೂರು ವಿದ್ಯುತ್ ಕೇಂದ್ರದಿಂದ ಹೊರಡುವ ಎಫ್-02 ಕುದರಿಹಾಳ ಕುಡಿಯುವ ನೀರಿನ ಫೀಡರ್ ಅಂಡ್ ಎಫ್-10 ಗಂಗಾಪುರ ಎನ್.ಜೆ.ವೈ ಫೀಡರ್‌ನ ಗ್ರಾಮಗಳಾದ ಗಂಗಾಪುರ, ಬೇವಿನಹಳ್ಳಿ, ಹುಲ್ಲತ್ತಿ ತಾಂಡಾ, ಗುಡುಗುರ, ಮೈದೂರು, ಯತ್ತಿನಹಳ್ಳಿ, ಹರನಗಿರಿ, ಕುದರಿಹಾಳ ಮತ್ತು ಕುದರಿಹಾಳ ಕುಡಿಯುವ ನೀರಿನ ಜಾಕವೆಲ್‌ಗಳಿಗೆ ಇಂದಿನಿಂದ ಮೂರು ದಿನ ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ನಾಳೆ ಶೋಷಿತ ಸಮುದಾಯಗಳ ಸಭೆ

ದಾವಣಗೆರೆ, ಜ. 3 - ಇದೇ ದಿನಾಂಕ 28 ರಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ವತಿಯಿಂದ ಚಿತ್ರದುರ್ಗದಲ್ಲಿ ನಡೆಯಲಿರುವ ಶೋಷಿತರ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆಯನ್ನು ನಾಡಿದ್ದು ದಿನಾಂಕ 5 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಗರದ ರೋಟರಿ ಬಾಲಭವನದಲ್ಲಿ ಕರೆಯಲಾಗಿದೆ. ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸುವರು.

# ಆವಿಷ್ಕಾರ, ನಾವೀನ್ಯತೆ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ಜ.3- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರೊ. ಯು.ಆರ್. ರಾವ್ ಪುರಸ್ಕಾರ, ಪದವಿ ವಿದ್ಯಾರ್ಥಿಗಳಿಗೆ ಪ್ರೊ. ಎಸ್.ಕೆ.ಶಿವಕುಮಾರ್ ಪುರಸ್ಕಾರ ಹಾಗೂ ಜನಸಾಮಾನ್ಯರು ಮತ್ತು ಬೋಧಕರಿಗೆ ಕೆ.ಎಸ್.ಟಿ.ಎ. ಪುರಸ್ಕಾರಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹತೆ, ಅರ್ಜಿ ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ವೆಬ್‌ಸೈಟ್ www.kstacademy.in ನಲ್ಲಿ ಪಡೆಯ ಬಹುದಾಗಿದೆ. ಅರ್ಜಿ ಸಲ್ಲಿಸಲು ಜನವರಿ 20 ಕೊನೆಯ ದಿನವಾಗಿರುತ್ತದೆ.



**ಸಿ.ಪಿ. ರಾಜಶೇಖರಪ್ಪ ನಿಧನ**

ದಾವಣಗೆರೆ ಕೆ.ಬಿ. ಬಡಾವಣೆ
ಕೆನರಾ ಬ್ಯಾಂಕ್ ರಸ್ತೆ, ಕೊನೆ ಕ್ರಾಸ್ ವಾಸಿ
**ಸಿ.ಪಿ. ರಾಜಶೇಖರಪ್ಪ (ಪ್ಯಾಟಿ ರಾಜಣ್ಣ)**
ಇವರು ದಿನಾಂಕ : 3.1.2024ರ ಬುಧವಾರ ಮಧ್ಯಾಹ್ನ 12.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 77 ವರ್ಷ ವಯಸ್ಸಾಗಿತ್ತು. ಪತ್ನಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 4.1.2024ರ ಗುರುವಾರ ಬೆಳಿಗ್ಗೆ 9.30ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ : 99020 15346**

# ಸಿದ್ದರಾಮಯ್ಯ 5 ವರ್ಷ ಸಿಎಂ ಆಗಿರಲು ಅಹಿಂದ ಬೆಂಬಲ ಬೇಕು

**ರುದ್ರನಕಟ್ಟೆ ಗ್ರಾಮದಲ್ಲಿ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ**

ದಾವಣಗೆರೆ, ಜ. 3 - ಅಹಿಂದ ವರ್ಗದವರು ಒಗ್ಗಟ್ಟಾಗಿದ್ದರಿಂದ ಹಿಂದುಳಿದ ವರ್ಗದ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕಿದೆ. ಅವರು ಐದು ವರ್ಷ ಅಧಿಕಾರದಲ್ಲಿರಬೇಕು ಎಂದರೆ, ಅಹಿಂದ ಬೆಂಬಲ ಬೇಕು ಎಂದು ಮಾಜಿ ಶಾಸಕ ಹಾಗೂ ಸಿದ್ದರಾಮಯ್ಯ ಪುತ್ರ ಯತೀಂದ್ರ ಕರೆ ನೀಡಿದ್ದಾರೆ.

ಇಲ್ಲಿಗೆ ಸಮೀಪದ ರುದ್ರನಕಟ್ಟೆಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಲ್ಲ ಅಹಿಂದ ವರ್ಗದವರಿಗೆ ಕಾರ್ಯಕ್ರಮ ರೂಪಿಸಿದ್ದರು. ಈಗ ಮತ್ತೆ ನಾವೆಲ್ಲ ಒಗ್ಗಟ್ಟಾಗಿದ್ದರಿಂದ ಹಿಂದುಳಿದ ವರ್ಗದ ಸಿದ್ದರಾಮಯ್ಯ ಅವರಿಗೆ ಅಧಿಕಾರ ಸಿಕ್ಕಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರು ಐದು ವರ್ಷ ಮುಂದುವರಿಯಬೇಕು ಎಂದರೆ ನಿಮ್ಮೆಲ್ಲರ ಬೆಂಬಲ, ಆಶೀರ್ವಾದ ಬೇಕು. ಮುಂದಿನ ನಾಲ್ಕು ವರ್ಷ ಆಶೀರ್ವಾದ ಇರಲಿ ಎಂದು ಹೇಳಿದರು.

ಬಿಜೆಪಿ ಬಂಡವಾಳಶಾಹಿಗಳ ಜೇಬಿಗೆ ಹಣ ಹಾಕುತ್ತಿದೆ. ಆದರೆ, ಗ್ಯಾರಂಟಿ ಯೋಜನೆಗಳ ಮೂಲಕ ಜನರ ಹಣವನ್ನು ಜನರಿಗೆ ಕೊಡುತ್ತಿದ್ದೇವೆ. ಗ್ಯಾರಂಟಿ ಮುಂದುವರೆಯಬೇಕಾದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲ್ಲಿಸಬೇಕು ಎಂದು ಯತೀಂದ್ರ ಕರೆ ನೀಡಿದರು.

ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಮಾತನಾಡಿ, ಅಧಿಕಾರವನ್ನು ಜನರ ಕಲ್ಯಾಣಕ್ಕೆ ಬಳಸುವ ಸಿದ್ದರಾಮಯ್ಯ ಆದರ್ಶವಾಗಿದ್ದಾರೆ ಎಂದರು.

ಹಿಂದುಳಿದವರು, ಶೋಷಿತರು, ಬಡವರು ಹಾಗೂ ಅಶಕ್ತರ ಕಲ್ಯಾಣಕ್ಕಾಗಿ ಅಧಿಕಾರ ಇರಬೇಕು ಎಂದು ಸಿದ್ದರಾಮಯ್ಯ ಕಳೆದ 40 ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದ್ದಾರೆ ಎಂದರು.

ಮಾಜಿ ಸಚಿವ ಹೆಚ್.ಎಂ. ರೇವಣ್ಣ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬಂದ ನಂತರ ಎಲ್ಲ ಸಮಾಜಗಳ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಬಸವ ತತ್ವದ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಬಡವರ ಏಳಿಗೆಗಾಗಿ ಕೊಡುಗೆಗಳನ್ನು ಕೊಡುತ್ತಿದ್ದಾರೆ ಎಂದರು.

ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮಾತನಾಡಿ, ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರನ್ನು ಐದು ವರ್ಷ ಇದೇ ಸ್ಥಾನದಲ್ಲಿ ಉಳಿಸಿಕೊಳ್ಳಲು ಪ್ರತಿಜ್ಞೆ ಮಾಡಬೇಕು ಎಂದು ಕರೆ ನೀಡಿದರು.

ಚಿತ್ರದುರ್ಗದಲ್ಲಿ ಜ.28ರಂದು ಬೃಹತ್ ಐತಿಹಾಸಿಕ ಸಮಾವೇಶ ನಡೆಯಲಿದೆ. ಕಾಂತರಾಜ್ ವರದಿ ಸ್ವೀಕರಿಸಿ ಜಾರಿಗೆ ತರಲು ಈ ಸಮಾವೇಶದಲ್ಲಿ ಒತ್ತಾಯಿಸಲಾಗುವುದು. ಈ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರೆ ಸಿದ್ದರಾಮಯ್ಯ ಅವರಿಗೆ ಬಲ ಬರುತ್ತದೆ ಎಂದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಸಂಗೊಳ್ಳಿ ರಾಯಣ್ಣ ಅವರು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದ್ದಾರೆ. ಅವರು ಎರಡನೇ ಸಂಗೊಳ್ಳಿ ರಾಯಣ್ಣ ಎಂದು ಬಣ್ಣಿಸಿದರು.

KA/SK/CTA-275/2021-2023. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas



ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಯಲ್ಲಿ ಭಾಗವಹಿಸಿದ್ದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಸೇರಿದಂತೆ, ಅನೇಕ ಗಣ್ಯರು ಪ್ರಸಾದ ಸ್ವೀಕರಿಸಿದರು.



ದಾವಣಗೆರೆ ಸಮೀಪದ ಬಸಾಪುರ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಯ ಎರಡನೇ ದಿನದ ಬುಧವಾರ ಭಕ್ತರು ಅನ್ನ, ಸಾರು, ಮಜ್ಜಿಗೆ ಪ್ರಸಾದ ಸೇವಿಸಿದರು. ದಾವಣಗೆರೆ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.



ಬಸಾಪುರದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಭಕ್ತಾದಿಗಳಿಗೆ ಅನ್ನ ಪ್ರಸಾದಕ್ಕಾಗಿ ಅಡುಗೆ ತಯಾರಿ ನಡೆಸುತ್ತಿರುವುದು.

## ಹಿಂದುಳಿದ ಶಾಸಕರು ಕಾಂತರಾಜ್ ವರದಿಗೆ ಆಗ್ರಹಿಸಲಿ

**(1ನೇ ಪುಟದಿಂದ)** 67 ಶಾಸಕರು ಸಹಿ ಸಂಗ್ರಹ ಮಾಡಿದ್ದಾರೆ. ಇದು ಒಳ್ಳೆಯದಲ್ಲ ಎಂದು ಸ್ವಾಮೀಜಿ ಹೇಳಿದರು.

ಕಾಂತರಾಜ್ ವರದಿ ಕೇವಲ ಜಾತಿ ಗಣತಿ ಅಲ್ಲ. ಇದು ಜಾತಿಗಳ ಸಾಮಾಜಿಕ ಸ್ಥಿತಿಗತಿ ಕುರಿತ ವಿವರವಾದ ವರದಿ. ಮೊದಲು ಈ ವರದಿ ಸ್ವೀಕರಿಸಬೇಕು. ನಂತರ ಅದರಲ್ಲಿರುವ ಲೋಪದೋಷಗಳ ಕುರಿತು ಚರ್ಚಿಸಬೇಕು ಎಂದವರು ತಿಳಿಸಿದರು.

ಈ ವರದಿ ವಿರೋಧಿಸಿರುವ ಶಾಸಕರನ್ನು ಹಿಂದುಳಿದ ವರ್ಗದ ಜನರು ತಿರಸ್ಕರಿಸಬೇಕು. ಜಾತಿ ಗಣತಿ ಹಾಗೂ ಮೀಸಲಾತಿ ವಿರೋಧಿಸುವ ರಾಜಕಾರಣಿಗಳಿಗೆ ಮತ ಹಾಕುವುದಿಲ್ಲ ಎಂದು ಶಕ್ತಿ ಪ್ರದರ್ಶನ ಮಾಡಬೇಕು. ಆಗ ಶಾಸಕರಿಗೆ ಬುದ್ಧಿ ಬರುತ್ತದೆ ಎಂದವರು ತಿಳಿಸಿದರು.

ಇತರೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಶಾಸಕರು ಈಗ ಸಿದ್ದರಾಮಯ್ಯ ಅವರಿಗೆ ಬೆಂಬಲವಾಗಿ ನಿಲ್ಲಬೇಕು. ನಿಮಗೆಲ್ಲ ಮತ ಹಾಕಿರುವುದು ಸಿದ್ದರಾಮಯ್ಯ ಮುಖ ನೋಡಿಕೊಂಡು ಎಂದವರು ತಿಳಿಸಿದರು. ನೀವು ಬಡವರ ಪರ, ಶೋಷಿತರ ಪರ ಹಾಗೂ ಹಿಂದುಳಿದ ಜಾತಿ ಜನಾಂಗಗಳ ಪರ ಮಾತನಾಡುತ್ತೀರ ಎಂದು ಮತ ಹಾಕಿದ್ದಾರೆ. ನೀವು ಸುಮ್ಮನಿದ್ದರೆ ಜಾತಿ ಗಣತಿ ವರದಿ ಅನುಷ್ಠಾನವಾಗುವುದಿಲ್ಲ. ಇದು ಮೋಸ ಮಾಡಿದಂತಾಗುತ್ತದೆ ಎಂದು ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ತಿಳಿಸಿದರು.

ಬರುವ ಜ.5ರಂದು ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರ ನೇತೃತ್ವದಲ್ಲಿ ಎಲ್ಲ ಹಿಂದುಳಿದ ಹಾಗೂ ಶೋಷಿತ ವರ್ಗಗಳ ಮಠಾಧೀಶರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಕಾಂತರಾಜ್ ವರದಿ ಸ್ವೀಕರಿಸುವಂತೆ ಒತ್ತಾಯಿಸಲಿದ್ದೇವೆ ಎಂದೂ ಅವರು ಹೇಳಿದರು.

## ಕುಡಿವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸಿ

**(1ನೇ ಪುಟದಿಂದ)** ಸರಿಯಾಗಿ ಚಿಕಿತ್ಸೆಯನ್ನು ನೀಡುತ್ತಿಲ್ಲ ಎಂಬ ದೂರುಗಳು ಬರುತ್ತಿವೆ ಇವರ ಬಗ್ಗೆ ಕ್ರಮವನ್ನು ಕೈಗೊಳ್ಳಿ ,ಬಯೋಮೆಟ್ರಿಕ್ ವ್ಯವಸ್ಥೆಯನ್ನು ಖಡ್ಡಾಯಗೊಳಿಸಿರಿ ಎಂದರು.

ತಾಲ್ಲೂಕಿನಲ್ಲಿ ಏಳು ಕೋವಿಡ್ ಪ್ರಕರಣಗಳು ಇವೆ ಎಂಬುದನ್ನು ವೈದ್ಯಾಧಿಕಾರಿಗಳಿಂದ ತಿಳಿದುಕೊಂಡ ಅವರು ಕೋವಿಡ್ ನ್ನು ಎದುರಿಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಆಸ್ಪತ್ರೆಯಲ್ಲಿ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು ಅಲ್ಲದೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ವಿಜಯಲಕ್ಷ್ಮಿ ಅತ್ತಿಕಾಳ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ಅಧಿಕಾರಿ ರೇಣುಕಾದೇವಿ ಇವರಿಗೆ ವಿದ್ಯಾರ್ಥಿನಿಲಯಗಳಲ್ಲಿ ಆರೋಗ್ಯ ತಪಾಸಣೆ ಮಾಡಿಸಿ ಕೋವಿಡ್‌ನ ನಿಯಮಗಳನ್ನು ಖಡ್ಡಾಯವಾಗಿ ಪಾಲಿಸುವಂತೆ ಸೂಚಿಸಿದರು.

ವಲಯ ಅರಣ್ಯ ಅಧಿಕಾರಿ ಮಲ್ಲಪ್ಪ ರವರಿಗೆ ಬೇಸಿಗೆ ಸಮಯದಲ್ಲಿ ಅರಣ್ಯದಲ್ಲಿ ಕಾಳ್ಗಿಚ್ಚು ಹರಡದಂತೆ ಮುಂಜಾಗ್ರತವಹಿಸಿ ಎಂದರು .

ತಹಸಿಲ್ದಾರ್ ಗಿರೀಶ್ ಬಾಬು ಮಾತನಾಡಿ, ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರನ್ನು ವಿತರಿಸುತ್ತಿರುವವರು ತಾಲೂಕು ಆಡಳಿತದ ಗಮನಕ್ಕೆ ಖಡ್ಡಾಯವಾಗಿ ತರಬೇಕು ಎಂದು ತಿಳಿಸಿದರು. ಅಲ್ಲದೇ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ನೀರನ್ನು ಪೂರೈಸಲು ವಿತರಕರನ್ನು ಟೆಂಡರ್ ಮಾಡಲಾಗುವುದು ಎಂದು ತಿಳಿಸಿದರು .

ಸಂದರ್ಭದಲ್ಲಿ ಪುರಸಭೆ ಮುಖ್ಯ ಅಧಿಕಾರಿ ಎರಗುಡಿ ಶಿವಕುಮಾರ್, ತಾಲ್ಲೂಕು ವೈದ್ಯಾಧಿಕಾರಿ ಡಾ. ಹಾಲಸ್ವಾಮಿ, ಡಾ. ಶಂಕರ್ ನಾಯಕ್, ಕುಡಿಯುವ ನೀರಿನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕಿರಣ್ ಕುಮಾರ್ ತೋಟಗಾರಿಕಾ ಇಲಾಖೆ ಅಧಿಕಾರಿ ಜಯಸಿಂಹ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ಹಿಂದೂ ರಾಷ್ಟ್ರ ಆದರೆ ಪಾಕ್‌ನಂತೆ ವಿನಾಶ : ಯತೀಂದ್ರ

**(1ನೇ ಪುಟದಿಂದ)** ರಾಜಕೀಯದಲ್ಲಿ ಹೊಸಬರಿಗೆ ಅವಕಾಶ ದೊರೆತಾಗ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ. ದಾವಣಗೆರೆಯಲ್ಲೂ ಹೊಸ ಪ್ರತಿಭೆಗಳಿಗೆ ರಾಜಕೀಯದಲ್ಲಿ ಅವಕಾಶ ಸಿಗಬೇಕಿದೆ ಎಂದರು.

ಹೊಸದುರ್ಗ ಕನಕ ಗುರುಪೀಠ ಶಾಖಾ ಮಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಯಾದವ ಮಹಾಸಂಸ್ಥಾನದ ಜಗದ್ಗುರು ಶ್ರೀ ಕೃಷ್ಣ ಯಾದವಾನಂದ ಸ್ವಾಮೀಜಿ, ಚಿತ್ರದುರ್ಗ ಸೇವಾಲಾಲ್ ಮಹಾಸಂಸ್ಥಾನದ ಜಗದ್ಗುರು ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ವೇದಿಕೆ ಮೇಲೆ ಶಾಸಕ ಕೆ.ಎಸ್. ಬಸವಂತಪ್ಪ, ಮಾಜಿ ಶಾಸಕ ಎಸ್. ರಾಮಪ್ಪ, ಕಂದನಕೋವಿ ಗ್ರಾ.ಪಂ. ಅಧ್ಯಕ್ಷ ಉಮೇಶ್, ಮುಖಂಡರಾದ ಶಿವಕುಮಾರ್ ಒಡೆಯರ್, ನಿಖಿಲ್ ಕೊಂಡಜ್ಜಿ, ವಿಜಯ್ ಕುಮಾರ್, ರಾಮಚಂದ್ರಪ್ಪ, ಮನೋಜ್, ಬಸವರಾಜ್ ಎಂ. ಬಸ್ಲಿಗುಂದಿ, ಕೆ.ಎಂ. ಕೃಷ್ಣಮೂರ್ತಿ, ಜಿ.ಸಿ. ನಿಂಗಪ್ಪ, ಗಂಗಮ್ಮ ಹನುಮಂತಪ್ಪ, ಆರ್.ಜಿ. ಶ್ರೀನಿವಾಸಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

# ಸಿದ್ದೇಶ್ವರ ಸ್ವಾಮೀಜಿ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ಗೌರವ : ಮುಖ್ಯಮಂತ್ರಿ

ವಿಜಯಪುರ, ಜ. 3 - ನಾನು ಎಂದೆಂದೂ ಬಸವಾದಿ ಶರಣರ ಅನುಯಾಯಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಇಲ್ಲಿನ ಜ್ಞಾನ ಯೋಗಾಶ್ರಮದಲ್ಲಿ ನಿನ್ನೆ ಏರ್ಪಾಡಾಗಿದ್ದ ಶ್ರೀ ಸಿದ್ದೇಶ್ವರ ಮಹಾಸ್ವಾಮೀಜಿ ಗುರು ನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಿದ್ದೇಶ್ವರ ಸ್ವಾಮೀಜಿಗಳ ಬದುಕೇ ನಮಗೆ ಆದರ್ಶ. ಅವರ ಜೀವನದ ಆಶಯದಂತೆ ಬದುಕುವುದೇ ಅವರಿಗೆ ಸಲ್ಲಿಸುವ ದೊಡ್ಡ ಗೌರವ ಎಂದು ಸಿದ್ದರಾಮಯ್ಯ ಅವರು ಗುರು ನಮನ ಸಲ್ಲಿಸಿದರು.

ಸಿದ್ದೇಶ್ವರ ಸ್ವಾಮೀಜಿ ಬಸವಣ್ಣನವರ ರೀತಿಯಲ್ಲೇ ಜಾತಿ ಮತ್ತು ವರ್ಗ ರಹಿತ ಸಮ ಸಮಾಜಕ್ಕಾಗಿ ಶ್ರಮಿಸಿದವರು ಎಂದು ಸ್ಮರಿಸಿದ ಅವರು, ಸಿದ್ದೇಶ್ವರ ಸ್ವಾಮಿಗಳು ಅಪಾರ ಜ್ಞಾನ ಸಂಪಾದಿಸಿದರು. ಆ ಜ್ಞಾನವನ್ನು ಜನಮಾನಸಕ್ಕೆ ಹಂಚಿದರು. ದ್ವೇಷ, ಅಹಂಕಾರದಿಂದ ಬಿಡುಗಡೆ ಹೊಂದಿದ ಅತ್ಯುನ್ನತ ಮನುಷ್ಯತ್ವದ ಸೃಷ್ಟಿಗೆ ಶ್ರಮಿಸಿದವರು. ಇವರ ಬದುಕು ಮತ್ತು ಸಾಧನೆಯನ್ನು ವರ್ಣಿಸಲು ಪದಗಳೇ ಇಲ್ಲ. ಅಷ್ಟು ಸರಳತೆ ಅವರ ಬದುಕು ಮತ್ತು ವ್ಯಕ್ತಿತ್ವದಲ್ಲಿ ಬೆರೆತಿತ್ತು ಎಂದು ಲಿಂಗೈಕ್ಯ ಶ್ರೀಗಳನ್ನು ಬಣ್ಣಿಸಿದರು.

ಧರ್ಮಾತೀತವಾಗಿ ಪ್ರತಿಯೊಬ್ಬರೂ ಬಾಳಬೇಕು ಎನ್ನುವುದು ಸಿದ್ದೇಶ್ವರ ಸ್ವಾಮಿಗಳ ಆಶಯವಾಗಿತ್ತು. ಸಮಾಜದ ಜಾತಿ ಮೈಲಿಗೆಯನ್ನು ಸೋಕಿಸಿಕೊಳ್ಳದೆ ದೂರ ಉಳಿದಿದ್ದ ದಾರ್ಶನಿಕರು. ಸಮಾಜದಲ್ಲಿ ದೂರದರ್ಶಿತ್ವ ಇಟ್ಟುಕೊಂಡು ಮನುಷ್ಯ ಸಮಾಜವನ್ನು ತಿದ್ದುವ ಗುರಿ ಹೊಂದಿದ್ದ ಕಾರಣಕ್ಕೇ ಇವರು ದಾರ್ಶನಿಕರಾಗಿದ್ದರು ಎಂದು ವಿವರಿಸಿದರು.

ಸಿದ್ದೇಶ್ವರ ಸ್ವಾಮಿಗಳ ಬಗ್ಗೆ ನನಗೆ ವಿಶೇಷ ಗೌರವವಿದೆ. ಸಿದ್ದೇಶ್ವರ ಸ್ವಾಮೀಜಿ ಅವರ ಬದುಕಿನ ಸಂದೇಶ ಮತ್ತು ಆದರ್ಶಗಳನ್ನು ಕಾಪಾಡುವ ಸ್ಮರಣಾರ್ಥ ಕಾರ್ಯ ಮಾಡಲು ಸರ್ಕಾರ ಸಿದ್ದವಿದೆ ಎಂದು ಭರವಸೆ ನೀಡಿದರು.

ಸಿರಿಗೆರೆ ಮಠದ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ, ಸಿದ್ದಗಿರಿ ಕನ್ನೇರಿಮಠ ಕೊಲ್ಲಾಪುರದ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ, ಜ್ಞಾನ ಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವ ಲಿಂಗ ಮಹಾಸ್ವಾಮೀಜಿ ಸೇರಿದಂತೆ ಹಲವಾರು ಸಮಾಜಗಳ ಶ್ರೀಗಳು ಗುರುನಮನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ್ ಮತ್ತು ಸಚಿವರಾದ ಎಚ್.ಕೆ. ಪಾಟೀಲ್, ಶಿವಾನಂದ ಪಾಟೀಲ್, ಮಾಜಿ ಸಚಿವ ಶಾಸಕ ವಿನಯ್ ಕುಲಕರ್ಣಿ ಮತ್ತು ಶಾಸಕರಾದ ಸಿ.ಎಸ್.ನಾಡಗೌಡ, ಅಶೋಕ್ ಮನಗೋಳಿ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗಹಿಸಿದ್ದರು.

## ರಾಣಿ ಚನ್ನಮ್ಮ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಜ.3- ಕ್ರೀಡೆ, ಕಲೆ, ಸಾಹಿತ್ಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಮಹಿಳೆಯರು ಹಾಗೂ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಆತ್ಮಸ್ಥೈರ್ಯದಿಂದ ಹೋರಾಡಿ, ಪಾರು ಮಾಡಿದಂತಹ ಮಹಿಳೆಯರಿಂದ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಇದೇ ದಿನಾಂಕ 10 ರೊಳಗೆ ಉಪ ನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲಮಂದಿರ ಕಟ್ಟಡ, 14ನೇ ಮುಖ್ಯ ರಸ್ತೆ, ಕುವೆಂಪು ನಗರ, ಎಂ.ಸಿ.ಸಿ 'ಬಿ' ಬ್ಲಾಕ್, ದಾವಣಗೆರೆ ದೂ. ಸಂ 08192-264056 ಇಲ್ಲಿಗೆ ಸಲ್ಲಿಸಬೇಕು ಎಂದು ಉಪ ನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

## ರಾಮ ಮಂದಿರ ನಿರ್ಮಾಣ ಕಾಂಗ್ರೆಸ್‌ಗೆ ಇಷ್ಟವಿಲ್ಲ

**(1ನೇ ಪುಟದಿಂದ)** ಎಂದು ಪ್ರಶ್ನಿಸಿದರು. ಆಟೋ ಓಡಿಸಿಕೊಂಡು ಅಲ್ಲೇ ಓಡಾಡುತ್ತಿದ್ದವನನ್ನು ತಲೆಮರೆಸಿಕೊಂಡಿದ್ದಾನೆ ಎಂದು ಹೇಳುತ್ತಾರೆ. ಇಷ್ಟು ದಿನ ಆಟೋ ಓಡಿಸಿಕೊಂಡು ಇದ್ದವನು ಪೊಲೀಸರ ಕಣ್ಣಿಗೆ ಕಾಣಲಿಲ್ಲವೇ? ಪಿಎಫ್‌ಐ ಕಾರ್ಯಕರ್ತರ ಮೇಲೆ ಹಾಕಿದ್ದ ಪ್ರಕರಣಗಳನ್ನು ವಾಪಸ್ ಪಡೆದುಕೊಂಡು ಅವರನ್ನು ಬಿಡುಗಡೆಗೊಳಿಸುವ ಕೆಲಸ ಮಾಡುತ್ತೀರಾ? ಎಂದು ಅಶೋಕ್ ಪ್ರಶ್ನಿಸಿದರು.

ರಾಜ್ಯದಲ್ಲಿ ನಾವು ಟಿಪ್ಪು ಆಡಳಿತ ನಡೆಸುತ್ತಿದ್ದೇವೆ ನೋಡಿ ಎಂದು ಹೇಳಲು ಸಿದ್ದರಾಮಯ್ಯ ಈ ರೀತಿ ಮಾಡುತ್ತಿದ್ದಾರೆ. ಟಿಪ್ಪು ಒಬ್ಬ ಹೇಡಿ, ಯುದ್ಧ ಮಾಡಲಾಗದೇ ಮಕ್ಕಳನ್ನು ಅಡವಿಟ್ಟವನು. ಅಂಥವನನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಕಾಂಗ್ರೆಸ್‌ನವರು ಬಿಂಬಿಸಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಜನರು ಕಾಂಗ್ರೆಸ್‌ಗೆ ತಕ್ಕ ಉತ್ತರ ಕೊಡುತ್ತಾರೆ ಎಂದರು.

ಎಲ್ಲ ಸಮೀಕ್ಷೆಯಲ್ಲಿಯೂ ನರೇಂದ್ರ ಮೋದಿಯವರು ಮತ್ತೆ ಪ್ರಧಾನಿಯಾಗುತ್ತಾರೆಂಬ ವರದಿ ಬಂದಿದೆ. ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸೋಲಿನ ಭೀತಿಯಿಂದ ಕಾಂಗ್ರೆಸ್ ರೀತಿ ಮಾಡುತ್ತಿದೆ. ಜತೆಗೆ ತಮ್ಮ ನಾಯಕಿಯನ್ನು ಮೆಚ್ಚಿಸಲು ಸಿದ್ದರಾಮಯ್ಯ ಈ ರೀತಿ ಮಾಡುತ್ತಿದಾರೆ ಎಂದರು. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಇತರರು ಈ ಸಂದರ್ಭದಲ್ಲಿದ್ದರು.

# ಅತಿ ಓಲೈಕೆಯೇ ಕಾಂಗ್ರೆಸ್‌ಗೆ ಮುಳುವಾಗಲಿದೆ



**(1ನೇ ಪುಟದಿಂದ)** ಸರ್ಕ್ಯೂಟ್ ಹೌಸ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಲ್ಪಸಂಖ್ಯಾತರಿಗೆ 10 ಸಾವಿರ ಕೋಟಿ ರೂ. ಕೊಡುವುದಾಗಿ ಹೇಳುವ ಸಿದ್ಧರಾಮಯ್ಯ, ದಲಿತರು ಹಾಗೂ ಹಿಂದುಳಿದವರಿಗೆ 1 ಸಾವಿರ ಕೋಟಿ ರೂ. ಏಕೆ ಕೊಡಬಾರದು? ಎಂದು ಪ್ರಶ್ನಿಸಿದರು. ರಾಮ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೂವತ್ತು ವರ್ಷಗಳ ಹಿಂದೆ ನಡೆದ ಪ್ರಕರಣವನ್ನು ಮತ್ತೆ ಕೆದಕುವ ಮೂಲಕ ಕಾಂಗ್ರೆಸ್ ಶಾಂತವಾಗಿದ್ದ ನಾಡಿನಲ್ಲಿ ಕೋಮುಗಲಭೆ ಸೃಷ್ಟಿಸಲು ಹೊರಟಿದೆ ಎಂದು ಆರೋಪಿಸಿದರು.

ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ಅವರೇ 600 ಹಳೆಯ ಕೇಸ್‌ಗಳನ್ನು ಮತ್ತೆ ಓಪನ್ ಮಾಡುವುದಾಗಿ ಹೇಳಿದ್ದಾರೆ. ಆದರೆ ಈ ಪ್ರಕರಣವನ್ನೇ ಏಕೆ ಓಪನ್ ಮಾಡಬೇಕು? ಇದಕ್ಕೆ ರಾಜಕೀಯ ಬಣ್ಣ ಹಚ್ಚುತ್ತಿರುವವರು ಯಾರು? ರಾಮ ಮಂದಿರ ನಿರ್ಮಾಣಕ್ಕೆ ಹೋರಾಟ ನಡೆಸಿದವರನ್ನು ಬಂಧಿಸುವ ವಿಚಾರದಲ್ಲಿ ರಾಜಕಾರಣ ಮಾಡಿ ರಾಮ ಭಕ್ತರ ಸಿಟ್ಟಿಗೆ ಕಾರಣರಾಗಬೇಡಿ. ಇದು ನಿಮಗೇ ಮುಳುವಾಗುತ್ತದೆ ಎಂದು ಕಾಂಗ್ರೆಸ್ ಮುಖಂಡರಿಗೆ ಎಚ್ಚರಿಸಿದರು.

ಶಾಲಾ-ಕಾಲೇಜುಗಳಲ್ಲಿ ಸಮವಸ್ತ್ರಕ್ಕೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿದೆ. ಆದಾಗ್ಯೂ ಮುಸ್ಲಿಮರ ಓಲೈಕೆಗಾಗಿ ಹಿಜಾಬ್ ಹಾಕಿಕೊಳ್ಳಬಹುದು. ಸಮವಸ್ತ್ರ ಕಡ್ಡಾಯವಲ್ಲ ಎಂದು ಸಿದ್ದರಾಮಯ್ಯ ಘೋಷಿಸಿದರು. ನಂತರ ಹಿಂದೂ ಸಂಘಟನೆಗಳ ಹೋರಾಟಕ್ಕೆ ಮಣಿದು ಮಾತು ತಿರುಗಿಸಿದರು.

ಕಾಂಗ್ರೆಸ್‌ನವರು ಅಭಿವೃದ್ಧಿ ವಿಚಾರ ಮುಂದಿಟ್ಟುಕೊಂಡು ಚುನಾವಣೆ ಎದುರಿಸುವುದಾದರೆ ನಮ್ಮ ಅಭ್ಯಂತರವಿಲ್ಲ. ಅದನ್ನು ಬಿಟ್ಟು ಹಿಂದುತ್ವ-ಮುಸ್ಲಿಂ ಎಂದು ಚುನಾವಣೆಗೆ ಬರುವುದಾದರೆ ನಾವು ಅದಕ್ಕೂ ಸಿದ್ಧರಿದ್ದೇವೆ. ಹಿಂದುತ್ವ ಉಳಿಸಲೆಂದೇ ಬಿಜೆಪಿ ಇದೆ ಎಂದು ಹೇಳಿದರು.

**ವಿಶ್ವ ನಾಯಕನಾಗುವತ್ತ ಮೋದಿ:** ಮುಂಬರುವ ಲೋಕಸಭಾ ಚುನಾವಣೆ ಇಡೀ ವಿಶ್ವದ ಗಮನ ಸೆಳೆಯುತ್ತಿದೆ ಎಂದು ಈಶ್ವರಪ್ಪ ಹೇಳಿದರು.

ನರೇಂದ್ರ ಮೋದಿ ಅವರು ಪ್ರಧಾನಿಯಾದ ಮೇಲೆ ವಿಶ್ವದ ಮುಸ್ಲಿಂ ರಾಷ್ಟ್ರಗಳೂ ಸೇರಿದಂತೆ ಎಲ್ಲಾ ರಾಷ್ಟ್ರಗಳ ಜೊತೆ ಸ್ನೇಹ ಸಂಬಂಧ ಹೆಚ್ಚಾಗಿದೆ. ಎಲ್ಲಾ ರಾಷ್ಟ್ರಗಳೂ ಮೋದಿ ಅವರನ್ನು ತಮ್ಮ ಸಹೋದರನಂತೆ ಭಾವಿಸುತ್ತಿವೆ ಎಂದರು.

ಭಾರತೀಯ ಸಂಸ್ಕೃತಿಯ ಪ್ರಭಾವಕ್ಕೆ ವಿಶ್ವವೇ ಹೊಂದಿಕೊಳ್ಳುತ್ತಿದೆ. ಕೋವಿಡ್ ಸಂದರ್ಭದಲ್ಲಿ ಲಸಿಕೆ ನೀಡಿದ ಭಾರತದ ಸಹಾಯವನ್ನು ದೇಶಗಳು ಸ್ಮರಿಸುತ್ತಿವೆ. ಭಾರತೀಯ ಸಂಸ್ಕೃತಿಯನ್ನು ಮೋದಿ ಮಾತ್ರ ಉಳಿಸಬಲ್ಲರು ಎನ್ನುವ ವಿಶ್ವಾಸ ಎಲ್ಲರಿಗೂ ಬಂದಿದೆ ಎಂದು ಹೇಳಿದರು.

ವಿದೇಶಿಗರು ಭಾರತದ ಮೇಲೆ ಆಕ್ರಮಣ ಮಾಡಿ ಮಂದಿರಗಳನ್ನು ಧ್ವಂಸ ಮಾಡಿದಾಗ ಅಹಲ್ಯಾಬಾಯಿ ಹೋಳ್ಕರ್ ಅವರು ಚಿಕ್ಕ ಪುಟ್ಟ ದೇವಸ್ಥಾನಗಳನ್ನು ಮರು ನಿರ್ಮಾಣ ಮಾಡಿದ್ದರು. ಅದೇ ರೀತಿ ಪ್ರಧಾನಿ ನರೇಂದ್ರ ಮೋದಿ ಅಯಧ್ಯೆಯ ಶ್ರೀರಾಮ ಮಂದಿರ, ಕಾಶಿ ವಿಶ್ವನಾಥ ಮಂದಿರಗಳನ್ನು ಕಾನೂನು ಬದ್ಧವಾಗಿಯೇ ನಿರ್ಮಿಸುತ್ತಿದ್ದಾರೆ. ಮಧುರಾ ಶ್ರೀ ಕೃಷ್ಣ ದೇವಸ್ಥಾನದ ಸರ್ವೇ ಮಾಡಲೂ ಸಹ ಆದೇಶ ಬಂದಿದೆ ಎಂದರು. ಭಾರತೀಯ ಸಂಸ್ಕೃತಿಯಿಂದ ನೆಮ್ಮದಿ ಎಂದು ವಿಶ್ವದ ರಾಷ್ಟ್ರಗಳಿಗೂ ಮನವರಿಕೆಯಾಗಿದೆ. ಹೀಗಾಗಿ ಮೋದಿ ಪ್ರಧಾನಿಯಾದರೆ ನೆಮ್ಮದಿ ಎಂದು ಭಾವಿಸಿದ್ದಾರೆ ಎಂದು ಈಶ್ವರಪ್ಪ ಹಳಿದರು.

ಪಕ್ಷದ ಮುಖಂಡರುಗಳಾದ ಕೋಳೇನಹಳ್ಳಿ ಬಿ.ಎಂ. ಸತೀಶ್, ರಾಜನಹಳ್ಳಿ ಶಿವಕುಮಾರ್, ಜಯಮ್ಮ ಇತರರು ಈ ಸಂದರ್ಭದಲ್ಲಿದ್ದರು.

### ಸಿದ್ದರಾಮಯ್ಯನ ಪೂಜಿಸಲು ಸ್ವಾತಂತ್ರ್ಯವಿದೆ, ಶ್ರೀರಾಮನ ಬಗ್ಗೆ ಟೀಕೆ ಸರಿಯಲ್ಲ

ಸಿದ್ಧರಾಮಯ್ಯನೇ ರಾಮನೆಂದು ಪೂಜಿಸುವುದಾದರೆ ಮಾಡಿಕೊಳ್ಳಲಿ. ಅವರಿಗೆ ಸ್ವಾತಂತ್ರ್ಯ ವಿದೆ. ಆದರೆ ರಾಮನ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ ಎಂದು ಈಶ್ವರಪ್ಪ ಕಿಡಿಕಾರಿದರು. ಮಾಜಿ ಸಚಿವ ಹೆಚ್. ಆಂಜನೇಯ ಅವರು, ಸಿದ್ಧರಾಮಯ್ಯನೇ ನಮಗೆ ಶ್ರೀರಾಮನಿದ್ದಂತೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ರಾಮ ಮಂದಿರ ಕೇವಲ ದೇವಸ್ಥಾನವಷ್ಟೇ ಅಲ್ಲ, ಅದು ರಾಷ್ಟ್ರಮಂದಿರ, ಭಾರತೀಯ ಸಂಸ್ಕೃತಿಯನ್ನು ಜಾಗೃತಗೊಳಿಸುವ ಉದ್ದೇಶದಿಂದ ಅದನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

### ಯಾವ ಮುಖ್ಯಮಂತ್ರಿಯನ್ನೂ ಆಹ್ವಾನಿಸಿಲ್ಲ

ಅಯೋಧ್ಯೆ ರಾಮಮಂದಿರ ಉದ್ಘಾಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನಷ್ಟೇ ಅಲ್ಲ, ಉತ್ತರ ಪ್ರದೇಶ ಹೊರತು ಪಡಿಸಿ ಯಾವ ಮುಖ್ಯಮಂತ್ರಿಗಳನ್ನೂ ಆಹ್ವಾನಿಸಿಲ್ಲ. ಕೇಂದ್ರ ಸಚಿವರನ್ನೂ ಆಹ್ವಾನಿಸಿಲ್ಲ ಎಂದು ಪ್ರಶ್ನೆಯೊಂದಕ್ಕೆ ಈಶ್ವರಪ್ಪ ಸ್ಪಷ್ಟಪಡಿಸಿದರು.

## ನಿಗದಿತ ದರಕ್ಕಿಂತ ಹೆಚ್ಚು ವಸೂಲಿ ಬೇಡ

**(1ನೇ ಪುಟದಿಂದ)** ಕೇಬಲ್ ಆಪರೇಟರ್‌ಗಳು ಗ್ರಾಹಕರಿಗೆ ಗುಣಮಟ್ಟದ ಸೇವೆಯ ಜೊತೆಗೆ ಟ್ರಾಯ್ ನಿಗದಿ ಮಾಡಿರುವ ದರವನ್ನು ಮಾತ್ರ ಕೇಬಲ್ ಆಪರೇಟರ್‌ಗಳು ಪಡೆದುಕೊಳ್ಳಬೇಕು. ನಿಗದಿತ ದರಕ್ಕಿಂತ ಹೆಚ್ಚು ದರವನ್ನು ಗ್ರಾಹಕರಿಂದ ವಸೂಲು ಮಾಡಿದಲ್ಲಿ ಅಂತಹ ಕೇಬಲ್ ಆಪರೇಟರ್‌ಗಳ ಪರಿಕರಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರಕರಣ ದಾಖಲು ಮಾಡಲಾಗುತ್ತದೆ ಎಂದು ಹೇಳಿದರು.

**ಸಾಮಾಜಿಕ ಜಾಲತಾಣ ಮತ್ತು ಯೂಟ್ಯೂಬರ್‌ಗಳ ಮೇಲೆ ನಿಗಾ:** ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ಸಮಾಜದಲ್ಲಿ ಗಾಬರಿ ಹುಟ್ಟಿಸುವವ ಸಂದೇಶ. ಅಶ್ಲೀಲ ಸಂದೇಶ, ದೃಶ್ಯಗಳನ್ನು ಬಿತ್ತರಿಸುವವರ ಮೇಲೆ ನಿಗಾವಹಿಸಿ ನಾಗರಿಕ ಸಂಹಿತೆ ಯಡಿ ಕರಮ ಕೈಗೊಳ್ಳಲಾಗುತ್ತದೆ. ಯುಟ್ಯೂಬರ್‌ಗಳು ಸುಳ್ಳು ಸುದ್ದಿಯನ್ನು ಬಿತ್ತರಿಸುವುದು ಮತ್ತು ತಮ್ಮ ಮನಸಾ ಇಚ್ಛೆ ಸುದ್ದಿಯನ್ನು ಸ್ಪಷ್ಟನೆ ಇಲ್ಲದೇ ಬಿತ್ತರ ಮಾಡಿದಲ್ಲಿ ಅಂತಹವರ ಮೇಲೆ ಕ್ರಮಕ್ಕೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಹೆಚ್ಚುವರಿ ರಕ್ಷಣಾಧಿಕಾರಿ ಮಂಜುನಾಥ್, ಸ್ಫೂರ್ತಿ ಸಂಸ್ಥೆ ರೂಪ್ಲಾ ನಾಯ್ಕ, ಶಿಕ್ಷಣ ತಜ್ಞರಾದ ರುದ್ರಮುನಿ ಹಿರೇಮಠ್, ವಕೀಲರಾದ ಸುಜಾತ ಉಪಸ್ಥಿತರಿದ್ದು ಸಲಹೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಹಾಗೂ ಸಮಿತಿ ಸದಸ್ಯ ಕಾರ್ಯದರ್ಶಿ ಧನಂಜಯ ಕೇಬಲ್ ಟೆಲಿವಿಷನ್ ನೆಟ್‌ವರ್ಕ್ ಕಾಯ್ದೆ ಅನುಷ್ಠಾನ ಕುರಿತು ಸಭೆಯಲ್ಲಿ ಮಂಡಿಸಿದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001

04-01-2024

**ನಿಯಮ 8(1) ಪರಿಶಿಷ್ಟ 4**

**-: ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸು:-**

**ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ**

ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳ ಸಹಿದಾರರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಮತ್ತು 9 ಓದಿಕೊಂಡಂತೆ, ಕಲಂ 13(2)ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 27-09-2023 ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಾಗಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮ 8 ಮತ್ತು 9ನ್ನು ಓದಿಕೊಂಡಂತೆ, ಸದರಿ ಆ್ಯಕ್ಟ್ ಪ್ರಕರಣ 13(4) ರನ್ವಯ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿನಾಂಕ: 04-01-2024 ರಂದು ಈ ಕೆಳಕಂಡ ಸ್ವತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸೊತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸೊತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ:**
ಮೆ॥ ಎ.ಆರ್.ಪಿ. ಮಾರ್ಕೆಟಿಂಗ್
**ಮಾಲೀಕರು:**
ಶ್ರೀ ಎ.ಆರ್. ರೇವಣಸಿದ್ದಪ್ಪ ಬಿನ್ ಪತ್ರೆಪ್ಪ. ಎ.ಆರ್.
ಆನೆಕೊಂಡ, ದಾವಣಗೆರೆ.
ಬರಬೇಕಾದ ಸಾಲದ ಮೊತ್ತ ಎಂಓಎಲ್.-317, ರೂ.36,69,365-00+ಇತರೆ ಖರ್ಚು, (ದಿನಾಂಕ 25-09-2023 ರ ವರೆಗೆ)
**ಜಾಮೀನುದಾರರ ಹೆಸರು ಮತ್ತು ವಿಳಾಸ:**
1) ಶ್ರೀ ಉಜ್ಜೀನಪ್ಪ. ಎ.ಆರ್. ಬಿನ್ ಬಸಪ್ಪ. ಎ.ಆರ್.
2) ಶ್ರೀ ಶಾಮನೂರು ಸಿದ್ದಪ್ಪ ಬಿನ್ ಶಿವಲಿಂಗಪ್ಪ.
**ಬ್ಯಾಂಕಿಗೆ ಆಧಾರವಾದ ಸ್ಥಿರಾಸ್ತಿಗಳ ವಿವರ:**
**ಆಸ್ತಿ ನಂ.1:-**
ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಎ.ಪಿ.ಎಂ.ಸಿ. ರೈಸ್ ಮಾರ್ಕೆಟ್, ಎಫ್ ಬ್ಲಾಕ್, ಈರುಳ್ಳಿ ಮಾರ್ಕೆಟ್ ಎದುರು, ದಾವಣಗೆರೆ ಸೈಟ್ ನಂ.ಎಫ್ 1, ದಾವಣಗೆರೆ ಮಹಾನಗರಪಾಲಿಕೆ ಚಾಲ್ತಿ ಡೋರ್ ನಂ.82/ಎಫ್-01, ಅಳತೆ 6.7052 X 8.8387 ಮೀಟರ್ಸ್ (22 X 29 ಅಡಿಗಳು) ಅಡಿಗಳಲ್ಲಿರುವ ವಾಣಿಜ್ಯ ಮಳಿಗೆ ಇದರ ಚೆಕ್ಕುಬಂದಿ:- ಪೂರ್ವಕ್ಕೆ : ಎ.ಪಿ.ಎಂ.ಸಿ. ರಸ್ತೆ ಪಶ್ಚಿಮಕ್ಕೆ : ಎ.ಪಿ.ಎಂ.ಸಿ. ಖಾಲಿ ನಿವೇಶನ, ಉತ್ತರಕ್ಕೆ : ಗೋಡಾನ್ ನಂ.ಇ18, ದಕ್ಷಿಣಕ್ಕೆ : ಖಾಲಿ ನಿವೇಶನ ಸಂ.ಎಫ್2.
**ಆಸ್ತಿ ನಂ.2:-**
ದಾವಣಗೆರೆ ನಗರದ ಆನೆಕೊಂಡ, ಕಸಬಾ ಹೋಬಳಿ, (ತೋಳಹುಣಸೆ ಮಂಡಲ್ ಪಂಚಾಯತ್), ಖಾನೆಸುಮಾರಿ ಯಾನೆ ಡೋರ್ ನಂ.473/58, ಖಾತಾ ನಂ.753, ಅಳತೆ 18 X 80 ಅಡಿಗಳಲ್ಲಿರುವ ಸೊತ್ತಿಗೆ ಚೆಕ್ಕುಬಂದಿ:- ಪೂರ್ವಕ್ಕೆ : ಗವಿಯಪ್ಪನವರ ಮನೆ, ಪಶ್ಚಿಮಕ್ಕೆ : ಇಂದ್ರ ರಾಜಪ್ಪನವರ ಮನೆ, ಉತ್ತರಕ್ಕೆ : ಕನ್ಸರ್‌ವೆನ್ಸಿ, ದಕ್ಷಿಣಕ್ಕೆ : ರಸ್ತೆ.

ಸಹಿ/-
ಸ್ಥಳ : ದಾವಣಗೆರೆ
ದಿನಾಂಕ: 04-01-2024

**ಅಧಿಕೃತ ಅಧಿಕಾರಿ**
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

# ಜನರ ಸಮಸ್ಯೆಗಳ ಪರಿಹಾರಕ್ಕೆ ವಾರಕ್ಕೊಮ್ಮೆ ಪ್ರತಿ ವಾರ್ಡ್‌ಗಳಿಗೆ ಭೇಟಿ

## ಹರಿಹರ ಜೈ ಭೀಮ ನಗರದಲ್ಲಿ ನಂದಿಗಾವಿ ಶ್ರೀನಿವಾಸ್

ಹರಿಹರ, ಜ.3- ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದರಿಂದ ಜನರ ಕುಂದು-ಕೊರತೆಗಳನ್ನು ನಿವಾರಿಸಲು ಮತ್ತು ಬಡವರ ಕಷ್ಟಗಳನ್ನು ಪರಿಹರಿಸುವ ದೃಷ್ಟಿಯಿಂದ ವಾರಕ್ಕೊಮ್ಮೆ ಪ್ರತಿ ವಾರ್ಡ್‌ಗಳಿಗೆ ಭೇಟಿ ಕೊಟ್ಟು, ಸ್ಥಳೀಯ ಜನರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿರುವುದಾಗಿ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಹೇಳಿದರು.

ನಗರದ ಜೈ ಭೀಮ ನಗರ ಬಡಾವಣೆಯ, ವಾರ್ಡ್‌ನಲ್ಲಿ ಇರುವ ಸಮಸ್ಯೆಗಳನ್ನು ಆಲಿಸಿ, ಅವರು ಮಾತನಾಡಿದರು.

ಬಡಾವಣೆಗಳಲ್ಲಿ ಚರಂಡಿ, ವಿದ್ಯುತ್, ಕುಡಿಯುವ ನೀರು, ಸ್ವಚ್ಚತೆ ಸೇರಿದಂತೆ, ಹಕ್ಕು ಪತ್ರಗಳ ವಿತರಣೆ ಹೀಗೆ ಹತ್ತು ಹಲವಾರು ಸಮಸ್ಯೆಗಳಿದ್ದು, ಸಚಿವರು ನನಗೆ ಕೆಲಸ ಮಾಡಿಕೊಡುವುದಾಗಿ ಭರವಸೆ ನೀಡಿದ್ದು, ವಾರದಲ್ಲಿ ಒಂದು ವಾರ್ಡ್‌ಗೆ ಭೇಟಿ ಕೊಟ್ಟು, ಸ್ಥಳೀಯ ಜನರ ಸಮಸ್ಯೆಗಳಿಗೆ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಹಾಕುವುದಾಗಿ ಹೇಳಿದರು.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ ಮಾತನಾಡಿ, ಜನರ ಕಷ್ಟಗಳನ್ನು ಅರಿಯಲು ವಾರ್ಡ್‌ಗಳಿಗೆ ಭೇಟಿಕೊಟ್ಟು, ಸ್ಥಳೀಯ ಜನರ ಕಷ್ಟಗಳ ಮಾಹಿತಿ ಪಡೆದು ಸರ್ಕಾರಕ್ಕೆ ಮುಟ್ಟಿಸಿ ಅವುಗಳಿಗೆ ಸ್ಪಂದಿಸುವ ಕಾರ್ಯವನ್ನು ನಂದಿಗಾವಿ ಶ್ರೀನಿವಾಸ್ ಮಾಡಲಿಕ್ಕೆ ಮುಂದಾಗಿದ್ದಾರೆ ಎಂದರು.

ನಗರಸಭೆ ಸದಸ್ಯ ಎಂ.ಎಸ್. ಬಾಬುಲಾಲ್ ಮಾತನಾಡಿ, ಈಗ ನಿಮ್ಮ ಮನೆಗೆ ಬರುತ್ತಿರುವ ಶ್ರೀನಿವಾಸ್ ನಂದಿಗಾವಿ ಅವರಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ತುಂಬಬೇಕು ಮತ್ತು ಸರ್ಕಾರದ ಯೋಜನೆಗಳು ತಲುಪದೇ ಇರುವವರ ಅರ್ಜಿಯನ್ನು ಮತ್ತೊಮ್ಮೆ ಸಲ್ಲಿಸಿ, ಯೋಜನೆಯ ಫಲ ಪಡೆದುಕೊಳ್ಳುವಂತೆ ಹೇಳಿದರು.

ಕಾಂಗ್ರೆಸ್ ಮಾಜಿ ವಕ್ತಾರ ಎಂ.ಬಿ. ಅಣ್ಣಪ್ಪ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ದೂರ ದೃಷ್ಟಿಯಿಂದ ಐದು ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಎಂ.ಎಸ್. ಬಾಬುಲಾಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಭಿದಾಲಿ ಮಲೇಬೆನ್ನೂರು, ದಾದಾಪೀರ್ ಭಾನುವಳ್ಳಿ, ಹಾಲಪ್ಪ, ಶಶಿನಾಯ್ಕ್, ರಿಯಾಜ್ ಅಹ್ಮದ್, ರಾಘವೇಂದ್ರ ಓಲೇಕಾರ, ಸಂತೋಷ್ ನೋಟದರ್, ಅಮಾನುಲ್ಲಾ ಖಾನ್, ಆನಂದ್, ಹೆಚ್. ಶಿವಪ್ಪ, ಹನುಮಂತಪ್ಪ, ಅಬ್ದುಲ್, ಮಂಜುನಾಥ್ ಮತ್ತಿತರರು ಹಾಜರಿದ್ದರು.

# ಅಯೋಧ್ಯೆ ಮಂತ್ರಾಕ್ಷತೆ ವಿತರಣೆ



ದಾವಣಗೆರೆ, ಜ.3- ನಗರದ 33ನೇ ವಾರ್ಡಿನಲ್ಲಿ ಅಯೋಧ್ಯೆಯಿಂದ ಆಗಮಿಸಿರುವ ಶ್ರೀರಾಮ ದೇವರ ಮಂತ್ರಾಕ್ಷತೆಯನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಹಿರಿಯರಾದ ಹನುಮಂತಪ್ಪ ಒಡೆಯರ್, ಶಶಿ ಒಡೆಯರ್ ಹಾಗು ಇತರರು ಇದ್ದರು.

# ನಗರದಲ್ಲಿ ಇಂದಿನಿಂದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ 54ನೇ ವಾರ್ಷಿಕೋತ್ಸವ

ದಾವಣಗೆರೆ, ಜ.3- ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಸಿದ್ಧಗಂಗಾ ಪದವಿಪೂರ್ವ ಕಾಲೇಜು, ಸಿದ್ಧಗಂಗಾ ಕಾಂಪೋಜಿಟ್ ಹೈಸ್ಕೂಲ್, ಸಿಬಿಎಸ್‌ಇ ಸ್ಕೂಲ್ ಮತ್ತು ನರ್ಸರಿ ಶಾಲೆಗಳ 54ನೇ ವಾರ್ಷಿಕ ಸಂಭ್ರಮ ಸಮಾರಂಭ ನಾಳೆ ದಿನಾಂಕ 4, 5 ಹಾಗೂ 6ರಂದು ಮೂರು ದಿನಗಳ ಕಾಲ ಪ್ರತಿ ದಿನ ಸಂಜೆ 5ರಿಂದ ಸಂಸ್ಥೆಯ ಆವರಣದಲ್ಲಿ ನಡೆಯಲಿದೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 4ರ ಗುರುವಾರ ಸಂಜೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಉಪಾಧ್ಯಕ್ಷೆ ಡಾ|| ಸುಧಾ ಕಾಮತ್ ಸಮಾರಂಭ ಉದ್ಘಾಟಿಸಲಿದ್ದಾರೆ. ಪ್ರಾಚಾರ್ಯೆ ಗಾಯತ್ರಿ ಚಿಮ್ಮಡ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಜಯಂತ್, ಪ್ರತಿಭಾ ಕೆ. ಸಿ ಮತ್ತು ಉಮ್ಮೆಸಲ್ಮಾ ಭಾಗವಹಿಸುವರು.


2024ರ ಎಂ.ಎಸ್.ಎಸ್ ಪ್ರಶಸ್ತಿಯನ್ನು ಅಮೃತ ವರ್ಷಿಣಿ ವಿದ್ಯಾಲಯದ ಸಂಸ್ಥಾಪಕರಾದ ಶಿಕ್ಷಣ ತಜ್ಞ ಪಿ. ಕೆ. ಪ್ರಕಾಶ್‌ರಾವ್ ಅವರಿಗೆ ಪ್ರದಾನ ಮಾಡಲಾಗುವುದು. 2023ರ ಸಿದ್ಧಗಂಗಾ ಪ್ರಶಸ್ತಿಗಳನ್ನು 10ನೇ ತರಗತಿ 90ಕ್ಕೂ ಅಧಿಕ ಅಂಕ ಪಡೆದ ಮಕ್ಕಳಿಗೆ ತಂದೆ-ತಾಯಿಗಳೊಂದಿಗೆ ಸನ್ಮಾನಿಸಲಾಗುತ್ತದೆ. 2023ರ ಎಂ. ಎಸ್. ಎಸ್ ಕ್ವಿಜ್ ವಿಜೇತರಿಗೆ ಬಹುಮಾನ ವಿತರಣೆ ಮತ್ತು ಟ್ರೋಫಿ ನೀಡಲಾಗುವುದು.

ಸಂಸ್ಥೆಯ ನಿರ್ದೇಶಕ ಡಾ|| ಜಯಂತ್ ಮಾತನಾಡಿ, ದಿನಾಂಕ 5ರಂದು ಪ್ರಗತಿಪರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ರೈತ ಮಹಿಳೆ ರಾಯಚೂರು ಮಾನ್ವಿಯ ಕವಿತಾ ಉಮಾಶಂಕರ್ ಮಿಶ್ರಾ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಪ್ರಾಚಾರ್ಯರಾದ ವಾಣಿಶ್ರೀ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎನ್. ಅಂಬುಜಾಕ್ಷಿ ಮತ್ತು ಜಿ.ಎಂ. ಅರುಣ್ ಕುಮಾರ್ ಆಗಮಿಸುವರು. 2023ರ ಪಿಯುಸಿಯಲ್ಲಿ 90ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳಿಗೆ ಪೋಷಕರೊಡನೆ ಸಿದ್ಧಗಂಗಾ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ದಿನಾಂಕ 6ರಂದು ಶಿಕ್ಷಣ ತಜ್ಞ, ಸಂಶೋಧಕ ಎ. ಎಚ್. ಸಾಗರ್ ಕಾರ್ಯಕ್ರಮ ಉದ್ಘಾಟಿಸುವರು. ಡಿ.ಎಸ್. ಹೇಮಂತ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಬುಸ್ಕಾ ವೆಂಕಟಕೃಷ್ಣ ಮತ್ತು ನಟರಾಜ್ ವಿ. ಭಾಗವಹಿಸುವರು. ಸಿದ್ಧಗಂಗಾ ಸ್ಕೌಟ್ ಮತ್ತು ಗೈಡ್ ಸ್ಥಳೀಯ ಸಂಸ್ಥೆ ಸ್ಥಾಪನೆಗೆ ಶ್ರಮಿಸಿದ ಶಶಿಕಲಾ ಅವರಿಗೆ ಸನ್ಮಾನ ಮತ್ತು ಪಿಯುಸಿ 2023ರಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಗೌರವಾರ್ಪಣೆ ನಡೆಯಲಿದೆ.

ಸಿದ್ಧಗಂಗಾ ಸಂಸ್ಥೆಯ ಪ್ರಾಚಾರ್ಯರಾದ ವಾಣಿಶ್ರೀ, ಮುಖ್ಯ ಶಿಕ್ಷಕಿ ಕೆ.ಎಸ್. ರೇಖಾರಾಣಿ, ಸಿಬಿಎಸ್‌ಇ ಶಾಲಾ ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಪತ್ರಿಕಾಗೋಷ್ಠಿಯಲ್ಲಿದ್ದರು.

# ಸರಳತೆಯ ಸಾಕಾರ ಮೂರ್ತಿ ಶ್ರೀ ಸಿದ್ದೇಶ್ವರ ಸ್ವಾಮೀಜಿ



ಯಾರ ವಿಚಾರಧಾರೆಗಳನ್ನಾದರೂ ಹೇಳಬಹುದು ಅಥವಾ ಬರೆಯಬಹುದು. ಆದರೆ, ಸರಳತೆಯ ಸಹಕಾರ ಮೂರ್ತಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ಬದುಕಿನ ವಿಚಾರಧಾರೆಯನ್ನು ಬರೆಯುವುದಾಗಲೀ ಅಥವಾ ಹೇಳುವುದಾಗಲೀ ಬಹಳ ಕಠಿಣದ ಕೆಲಸ ಮತ್ತು ಅವರ ಸರಳ ಬದುಕಿನ ಬಗ್ಗೆ ವರ್ಣಿಸಲು ಪದಗಳೇ ಇಲ್ಲವೇನೂ ಅನಿಸುತ್ತದೆ. ಆದರೂ ಒಂದು ಸಣ್ಣ ಪ್ರಯತ್ನದ ಮೂಲಕ ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸುತ್ತಿದ್ದೇನೆ.

ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಬಿಜ್ಜರಗಿ ಗ್ರಾಮದಲ್ಲಿ ಒಂದು ಸಾಮಾನ್ಯ ರೈತ ಕುಟುಂಬದಲ್ಲಿ 1941 ಅಕ್ಟೋಬರ್ 21 ರಂದು ಜನಿಸಿ, ಅಸಾಮಾನ್ಯ ಸಾಧನೆ ಮಾಡಿದಂತಹ ಮಹಾಪುರುಷರು, ಆದರ್ಶ ಗುರುಗಳು, ಗುರುಗಳಿಗೆ ಆದರ್ಶ ಗುರುಗಳಾಗಿ, ಸಂತರಿಗೆ ಸಂತ ಚಕ್ರವರ್ತಿಯಾಗಿ, ಹೋಲಿಕೆ ಇಲ್ಲದ ಸಂತರಾಗಿ ಅತ್ಯಂತ ಸರಳತೆಯಲ್ಲಿ ಸರಳತೆಯ ಬದುಕನ್ನು ನಡೆಸಿದವರು, ದೈವತ್ವದ ಗುಣ ಹೊಂದಿದಂತಹ ಅಪರೂಪದ ಗುರುಗಳು ಶ್ರೀ ಸಿದ್ದೇಶ್ವರ ಗುರುಗಳು.

ಸರಳ ಹಾಗೂ ಮೃದು ಸ್ವಭಾವದ ಶ್ರೀ ಸಿದ್ದೇಶ್ವರ ಗುರುಗಳ ದೂರಾಲೋಚನೆ, ಆಳವಾದ ಅಧ್ಯಯನದ ಚಿಂತನೆಗಳ ಮೂಲಕ ಅನುಭವ ಹೊಂದಿದ ಗುರುಗಳು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ ಮತ್ತು ಹಿಂದಿ ಭಾಷೆಗಳನ್ನು ಕಲಿತಿದ್ದರು. ಹೀಗೆ ಎಲ್ಲಾ ಭಾಷೆಗಳಲ್ಲಿಯೂ ಸಹ ಪ್ರವಚನಗಳ ಮೂಲಕ ತತ್ವ ಸಿದ್ದಾಂತ, ವಚನಗಳು, ಉಪಕಥೆಗಳು ಇತಿಹಾಸದ ಘಟನೆಗಳು, ಕಲ್ಲು, ಮಣ್ಣು, ನೀರು, ಗಿಡ, ಮರ, ಪ್ರಾಣಿ-ಪಕ್ಷಿಗಳ ಭಾವನೆಗಳನ್ನು ಅರಿತು, ಅವುಗಳಿಗೆ ಜೀವ ಚೈತನ್ಯವಿದೆ ಎಂಬುದನ್ನು ಮತ್ತು ಪ್ರಕೃತಿ ಸೌಂದರ್ಯಗಳ ಬಗ್ಗೆ ಜನರಿಗೆ ವಿವರಿಸಿ, ಹೇಳುವುದೇ ಅವರ ವೈಸಿಷ್ಟ್ಯವಾಗಿತ್ತು.

ನೆಮ್ಮದಿ ಮತ್ತು ಸಂತೋಷದಿಂದ ಹೇಗೆ ಬದುಕಬೇಕು? ತೃಪ್ತ ಜೀವನದ ಗುಟ್ಟೇನು ? ಒತ್ತಡದ ಜೀವನದಿಂದ ಹೇಗೆ ಹೊರ ಬಂದು ನೆಮ್ಮದಿಯ ಜೀವನ ನಡೆಸಬಹುದು ಎಂದು ಬದುಕು ಬದಲಿಸುವುದನ್ನು ಪ್ರವಚನಗಳ ಮೂಲಕ ತಿಳಿಸುತ್ತಿದ್ದರು.

ನಾಡಿನಲ್ಲಿ ಅನೇಕ ಸಂತರು ಬಂದರು, ಹೋದರು ಮತ್ತು ಇದ್ದಾರೆ. ಆದರೆ, ಆ ಸ್ಥಾನಕ್ಕೆ ಮತ್ತು ಮಾತಿಗೆ ತಕ್ಕಂತೆ ನಡೆದುಕೊಳ್ಳುವಂತಹ ಜ್ಞಾನಯೋಗಿಗಳು ಅಪರೂಪ. ಅಂತವರಲ್ಲಿ ನುಡಿದಂತೆ ನಡೆದು ತೋರಿಸಿದ, ನಡೆದಾಡುವ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು.

ಬರುವಾಗ ಏನೂ ತಂದಿಲ್ಲ, ಹೋಗುವಾಗ ಏನನ್ನೂ ಹೋಯ್ಯುವುದಿಲ್ಲ, ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ದಾಸರವಾಣಿ ಅರಿತು ನಡೆದವರು.


ಅವರ ಬದುಕಿನ ಸರಳತೆ, ನಿರಾಡಂಬರ ನಿಸ್ವಾರ್ಥ ಸೇವೆ, ಅಹಂಕಾರ ರಹಿತ (ಅಹಂಕಾರ ಶೂನ್ಯ) ಯಾವ ಹಂಗಿಗೂ ಒಳಗಾಗದೇ, ಜೇಬಿಲ್ಲದ ಅಂಗಿಯ ಧರಿಸಿದಂತಹ, ಯಾವ ಬ್ಯಾಂಕಿನಲ್ಲಿಯೂ ಅಕೌಂಟ್ ಇಲ್ಲದೇ ಸರಳ, ಆದರ್ಶ ಬದುಕನ್ನು ನಡೆಸಿ, ಜಗತ್ತಿಗೇ ತೋರಿಸಿದ ಶ್ರೀ ಸಿದ್ದೇಶ್ವರ ಸ್ವಾಮೀಜಿಯ ಪ್ರವಚನ ಕೇಳಲು ಜಗತ್ತಿನಾದ್ಯಂತ ಸಾಗರದಂತೆ ಭಕ್ತರು ಅರಿದು ಬರುತ್ತಿದ್ದರು.

ಇವತ್ತಿನ ಆಧುನಿಕ ಒತ್ತಡದ ಜೀವನ ಶೈಲಿಯಲ್ಲಿ ಇಂತಹ ಪರಿಪೂರ್ಣ ಯೋಗಿ ಪಡೆದ ನಾವು-ನೀವುಗಳು ಧನ್ಯರು ಮತ್ತು ಮುಂದಿನ ಯುವ ಪೀಳಿಗೆಗೆ ಇಂತಹ ಗುರುಗಳು ಮಾದರಿಯಾಗಲಿ.



**- ಹೆಚ್.ವಿ.ಮಂಜುನಾಥ ಸ್ವಾಮಿ**
ಮೊ. : 98448-82366

# ನಾವೇ ಅಸಡ್ಡೆ ತೋರಿದರೆ ಕನ್ನಡ ಉದ್ಧಾರ ಆಗುವುದಾದರೂ ಹೇಗೆ ? ಕೆ.ಎನ್ ಸ್ವಾಮಿ ಪ್ರಶ್ನೆ



ದಾವಣಗೆರೆ,ಜ.3- ಹಾವೇರಿ ಜಿಲ್ಲೆ ರಟ್ಟೀಹಳ್ಳಿ ತಾಲ್ಲೂಕಿನ ಸರ್ವಜ್ಞನ-ಮಾಸೂರಿನ ಶ್ರೀ ಎಸ್.ಬಿ. ಪಾಟೀಲ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ಕರ್ನಾಟಕ ರಾಜ್ಯ ಸುವರ್ಣ ಸಂಭ್ರಮೋತ್ಸವ ಸಮಾರಂಭದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸುಪ್ರಸಿದ್ದ ಕವಿಗಳ ಕವಿತಾ ಗಾಯನ ಮತ್ತು ವಾಚನ ಹಾಗೂ 'ಮಹಲಿಂಗರಂಗ ಪ್ರಶಸ್ತಿ' ಪುರಸ್ಕೃತ ಸಾಹಿತಿ ಕೆ.ಎನ್ ಸ್ವಾಮಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸ್ವಾಮಿ, ನಮ್ಮ ತಾಯ್ನುಡಿ ಕನ್ನಡದ ಬಗ್ಗೆ ಕನ್ನಡಿಗರಾದ ನಾವೇ ಅಸಡ್ಡೆ ತೋರಿದರೆ ನಾಡು-ನುಡಿಯ ಉದ್ದಾರವಾಗುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ಪ್ರಜ್ಞಾವಂತ ಕನ್ನಡಿಗಳು ಶಾಸ್ತ್ರೀಯ ಮನ್ನಣೆ ಪಡೆದ ಕನ್ನಡದ ಬಗ್ಗೆ ಸರ್ಕಾರದ ಮೇಲೆ ಒತ್ತಡ ತಂದು, ಕನ್ನಡತನದ ಉಳಿವಿಗಾಗಿ ಹೋರಾಡದಿದ್ದರೆ ಗತ್ಯಂತರವಿಲ್ಲ ಎಂದು ಅವರು ಎಚ್ಚರಿಸಿದರು.

ನಗರದ ಕಾವ್ಯರ್ಷಿ ಕರ್ಕಿ ಕಾರ್ಯಾಲಯ ಮತ್ತು ಸರ್ವಜ್ಞ ವಿದ್ಯಾಪೀಠದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಮಾರಂಭದ ಅಧ್ಯಕ್ಷತೆಯನ್ನು ವಿದ್ಯಾಪೀಠದ ಅಧ್ಯಕ್ಷ ಅಶೋಕ ಕರೇಗೌಡ್ರು ಪಾಟೀಲ ವಹಿಸಿದ್ದರು.

ಮಾಸೂರಿನ ಕವಿ ಡಾ.ಜಯಪ್ಪ ಹೊನ್ನಾಳಿ ಉದ್ಘಾಟಿಸಿ ಮಾತನಾಡಿ, ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡದ ಸಾಂಸ್ಕೃತಿಕ ಪರಂಪರೆಯ ಪ್ರಜ್ಞೆಯನ್ನು ಈಗಿನ ವಿದ್ಯಾರ್ಥಿಗಳು ವಿಶೇಷವಾಗಿ ಅಧ್ಯಯನ ಮಾಡುವ ಅಗತ್ಯವಿದೆ ಎಂದರು.

ಪ್ರಾಚಾರ್ಯ ಕೆ.ಆರ್.ಕೋಣ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಕವಿ ನಿಂಗಪ್ಪ ಚಳಗೇರಿ, ಕಾಲೇಜಿನ ಆಡಳಿತ ಮಂಡಳಿ ಸದಸ್ಯ ನಾರಾಯಣಪ್ಪ ಗೌರಕ್ಕನವರ್, ದಾವಣಗೆರೆಯ ಶ್ರೀ ಕಾವ್ಯರ್ಷಿ ಕಾರ್ಯಾಲಯದ ಸಂಸ್ಥಾಪಕ ಗಣಪತಿ ದೀಕ್ಷಿತ್, ರಾಧಾ ಚಳಗೇರಿ ಮತ್ತಿತರರು ಆಗಮಿಸಿದ್ದರು.

# ವಸತಿ ಸೌಲಭ್ಯಕ್ಕಾಗಿ ಕಡ್ಲೆಗೊಂದಿ, ಭಾನುವಳ್ಳಿ ಗ್ರಾಮಸ್ಥರ ಒತ್ತಾಯ

ದಾವಣಗೆರೆ, ಜ.3- ಹರಿಹರ ತಾಲ್ಲೂಕು ಭಾನುವಳ್ಳಿ ಹಾಗೂ ಕಡ್ಲೆಗೊಂದಿ ಗ್ರಾಮಗಳ ನಿರ್ವಸತಿಗ ದಲಿತ ಹಾಗೂ ಹಿಂದುಳಿದ ಸಮುದಾಯದವರಿಗೆ ವಸತಿ ಯೋಜನೆ ಜಾರಿಗೊಳಿಸುವಂತೆ ಗ್ರಾಮಸ್ಥರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ವಸತಿ ಸೌಲಭ್ಯಕ್ಕಾಗಿ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸುತ್ತಿದ್ದರೂ ಸಂಬಂಧಿಸಿದವರು ಸ್ಪಂದಿಸಿಲ್ಲ ಎಂದು ಆರೋಪಿಸಿದರು. ತಾಲ್ಲೂಕು ಮತ್ತು ಜಿಲ್ಲಾಡಳಿತ ಎಚ್ಚರಿಸುವ ದೃಷ್ಟಿಯಿಂದ ನಾಡಿದ್ದು ದಿನಾಂಕ 5ರಂದು ಹರಿಹರದಲ್ಲಿ ಬೃಹತ್ ತಮಟೆ ಚಳವಳಿ ಆಯೋಜಿಸಿದ್ದು, ಅಂದು ಬೆಳಿಗ್ಗೆ ಪಕ್ಕೀರ ಸ್ವಾಮಿ ಮಠದಿಂದ ತಾಲ್ಲೂಕು ಕಚೇರಿ ವರೆಗೆ ಮೆರವಣಿಗೆ ಮೂಲಕ ಆಗಮಿಸಲಾಗುವುದು. ಕದಸಂಸ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಚಳವಳಿಯಲ್ಲಿ ಭಾಗವಹಿಸಲಿದ್ದಾರೆ ಎಂದರು. ಕಡ್ಲೆಗೊಂದಿ ಹಾಗೂಭಾನುವಳ್ಳಿ ಗ್ರಾಮಸ್ಥರುಗಳಾದ ಜೈತುನ್‌ಬೀ, ಸಾಕಮ್ಮ, ಮುಬೀನಾ, ಸುಶೀಲಮ್ಮ, ಲಕ್ಷ್ಮಮ್ಮ ಪತ್ರಿಕಾಗೋಷ್ಠಿಯಲ್ಲಿದ್ದರು.

## 3ನೇ ಸಮನ್ಸ್‌ಗೂ ಕೇಜ್ರಿವಾಲ್ ಗೈರು

ನವದೆಹಲಿ, ಜ. 3 – ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಕಳಿಸಿದ ಮೂರನೇ ಸಮನ್ಸ್‌ಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಗೈರಾಗಿದ್ದಾರೆ. ರಾಜ್ಯ ಸಭಾ ಚುನಾವಣೆ ಹಾಗೂ ಗಣರಾಜ್ಯೋತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಿದೆ. ಅಲ್ಲದೇ ಜಾರಿ ನಿರ್ದೇಶನಾಲಯವು ತನ್ನ ಎದುರು ಹಾಜರಾಗಲು ಕಾರಣ ಗಳನ್ನು ನೀಡಿಲ್ಲ ಎಂದು ಕೇಜ್ರಿವಾಲ್ ಹೇಳಿದ್ದಾರೆ. ತಾವು ಹಾಜರಾಗುವ ಬದಲು, ಪ್ರಶ್ನೆಗಳನ್ನು ಕಳಿಸಿದರೆ ಅದಕ್ಕೆ ಉತ್ತರ ಕಳಿಸುವುದಾಗಿ ಕೇಜ್ರಿವಾಲ್ ಹೇಳಿದ್ದಾರೆ.

# ಅಮೃತ ವರ್ಷಿಣಿಯಲ್ಲಿ ವಸ್ತು ಪ್ರದರ್ಶನ



**ಹರಿಹರ**

ಹರಿಹರ, ಜ.3- ಇಲ್ಲಿನ ಅಮೃತ ವರ್ಷಿಣಿ ವಿದ್ಯಾಲಯದ ವೃಂದಾವನ ಆವರಣದಲ್ಲಿ 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲೆ ಹಾಗೂ ವಿಜ್ಞಾನ, ಸ್ಕೌಟ್ಸ್ ಮತ್ತು ಗೈಡ್ಸ್ ಗೆಜೆಟ್ ಗಳ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ರಾಣೇಬೆನ್ನೂರಿನ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ್ ಗಿಡಗಳಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ, ಇಂತಹ ಪ್ರದರ್ಶನಗಳಿಂದ ಮಕ್ಕಳ ಪ್ರತಿಭೆಗಳು ಹೊರ ಹೊಮ್ಮಲು ಸಾಧ್ಯ. ಬರೀ ಪಠ್ಯ ಪುಸ್ತಕಗಳಿಗೆ ಒತ್ತು ಕೊಡದೇ ಶಾಲೆಯಲ್ಲಿ ಕಲಿಸುವ ಅನೇಕ ಬಗೆ ಬಗೆಯ ಚಟುವಟಿಕೆಗಳು ಮಕ್ಕಳಲ್ಲಿನ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತದೆ. ಇಲ್ಲಿಯ ವಸ್ತು ಪ್ರದರ್ಶನ ನೋಡಿದರೆ ಒಬ್ಬ ಐ.ಎ.ಎಸ್ ಮಾಡಬಹುದಾದಷ್ಟು ವಿಷಯಗಳು ಲಭ್ಯವಾಗುತ್ತವೆ ಎಂದು ನುಡಿದರು.

ಶಾಲಾ ಛೇರ್ಮನ್ ಪಿ.ಕೆ.ಪ್ರಕಾಶರಾವ್ ಅತಿಥಿಗಳಿಗೆ, ವಿದ್ಯಾರ್ಥಿಗಳು ತಯಾರಿಸಿದ ಮಾಡೆಲ್‌ಗಳನ್ನು ಹಾಗೂ ಕೆಲ ಚಾಲನೆಯುಕ್ತ ವಸ್ತು ಪ್ರದರ್ಶನಗಳನ್ನು ಪರಿಚಯಿಸಿದರು.

ಶಾಲಾ ಆಡಳಿತ ಮಂಡಳಿ ಪರವಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ಪಾಟೀಲ ಹಾಗೂ ಶೈಕ್ಷಣಿಕ ಸಂಪನ್ಮೂಲ ಅಧಿಕಾರಿ ರಾಜು ಉಕ್ಕುಂದ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಚೇತನಾ ವಿ. ರಾವ್, ಕಾರ್ಯದರ್ಶಿ ವಿನಯ್ ಪಿ.ರಾವ್, ಡಾ. ಜಿ.ಜೆ. ಮೆಹೆಂದಳೆ, ಪಂಚಾಯತಿ ಉಪಾಧ್ಯಕ್ಷ ಬಸವಣ್ಣೆಪ್ಪ ಎಚ್. ಮತ್ತು ಇತರರು ಉಪಸ್ಥಿತರಿದ್ದರು.


**ಸೈಟುಗಳು ಮಾರಾಟಕ್ಕೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 40x55, 30x55, 40x60 ಪಶ್ಚಿಮ 30x55, 30x40 ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 40x65, ಪಶ್ಚಿಮ 30x70 (60 ಅಡಿ ರಸ್ತೆ) ಮಹಾಲಕ್ಷ್ಮಿ ಲೇಔಟ್ ಪೂರ್ವ 40x50 (ಕಾವೇರಿ Apartment ಹತ್ತಿರ)
ಐಗೂರು ವಿಜಯಕುಮಾರ್
99457 02495

**ಸೈಟು ಮಾರಾಟಕ್ಕಿದೆ**
ಸರಸ್ವತಿ ನಗರ 'ಸಿ' ಬ್ಲಾಕ್‌ನ 40 ಅಡಿ ರಸ್ತೆಯಲ್ಲಿನ ಉತ್ತರ ಮುಖದ 30x42 ಅಡಿ ಅಳತೆಯ ಫೈನಲ್ ಅಪ್ರೂವ್ಡ್ ಸೈಟ್ ಮಾರಾಟಕ್ಕಿದೆ.
ಮೊ. 99646-13795

**ಬೇಕಾಗಿದ್ದಾರೆ**
* ಆಟೋ ಡ್ರೈವರ್
* ಅಕೌಂಟೆಂಟ್ (ಮಹಿಳೆಯರು)
ಸಂಪರ್ಕಿಸಿ :
S.V. SALES CORPORATION
P.B.Road, Davangere.
63620 23451, 97434 37003

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್ಎಂ., ಎಎನ್ಎಂ
91486 83185

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಕೆಲಸಕ್ಕೆ ಬೇಕಾಗಿದ್ದಾರೆ**
ಸತೀಶ್ ಎಂಟರ್ ಪ್ರೈಸಸ್
ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
+91 96630 70798

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಹೋಟೆಲ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ**
Servicing, Cutting, Clearing
15000 ಸಂಬಳ ಇರುತ್ತದೆ, (Daily 500)
ಸಮಯ : ಬೆಳಿಗ್ಗೆ 9am ರಿಂದ ರಾತ್ರಿ 11.
ವಿಳಾಸ : ಶಾಮನೂರು ರಸ್ತೆ, ಎಸ್.ಎಸ್. ಮಾಲ್ ಹತ್ತಿರ, ದಾವಣಗೆರೆ. ಸಂಪರ್ಕಿಸಿ :
97433 94285,90711 85572

**ಮಾರಾಟಕ್ಕಿದೆ**
ಹರಿಹರದಲ್ಲಿ ಲೇ ಔಟ್ ಹತ್ತಿರ (ಪಿ.ಬಿ. ರಸ್ತೆ ಹತ್ತಿರ) 20 ಗುಂಟೆ ಜಮೀನು ಮಾರಾಟಕ್ಕಿದೆ.
(Contact buyers only)
Sharma
63608 66997

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist
(ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ಇಂದು ದಿನಾಂಕ 4.1.2024ರ ಗುರುವಾರದಂದು
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ ಅಡಿಕೆ ತೋಟ, 2.12 ಗುಂಟೆ ಗದ್ದೆ, 8 ಎಕರೆ ಗದ್ದೆ, 10 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಮನೆಗಳು ಮಾರಾಟಕ್ಕಿವೆ**
30x60 ಪಶ್ಚಿಮ ತರಳಬಾಳು ಬಡಾವಣೆ, 44x60 ಪೂರ್ವ MCC 'A' 'B' ಸೈಟ್, 44x60 ಪೂರ್ವ MCC 'B' 'B' 30x40 ಉತ್ತರ SS layout 'B' ಮನೆ 95x100 ಸೈಟ್ NH-4 ರೋಡ್ ಇವೆ.
ಏಜೆಂಟರು S. ಯಲ್ಲೋಜಿರಾವ್
97418 11694

**ಮನೆ ಬಾಡಿಗೆಗೆ**
ಚೌಕಿಪೇಟೆಯಲ್ಲಿ ಬೇವಿನ ಮರದ ಹತ್ತಿರ, 2 BHK, 1ನೇ ಮಹಡಿಯಲ್ಲಿ 2 ಮನೆ ಬಾಡಿಗೆಗೆ ಇವೆ.
94484 05913
94488 45062

**ಮನೆ ಮಾರಾಟಕ್ಕೆ ಇದೆ**
ಅಶೋಕ ನಗರ, ಕೊಂಡಜ್ಜಿ ರೋಡ್, 20X40 ಅಳತೆಯ ಉತ್ತರ ದಿಕ್ಕಿನ ಮನೆ ಮಾರಾಟಕ್ಕೆ ಇದೆ.
ಮಾಲೀಕರ ಫೋನ್ ನಂ.
91647 16836
73489 42939

**ಬೇಕಾಗಿದ್ದಾರೆ**
ಸರ್ವಜಿತ್ ಯುರಾಲಜಿ & ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
7ನೇ ಕ್ರಾಸ್, 7ನೇ ಮೇನ್, ಚೇತನ ಹೋಟೆಲ್ ರಸ್ತೆ, ದಾವಣಗೆರೆ.
ನುರಿತ ಕೆಲಸಗಾರರು, OT ನರ್ಸ್‌ಸ್, ವಾರ್ಡ್ ನರ್ಸ್‌ಸ್, ಐಸಿಯು ನರ್ಸ್‌ಸ್, ಬಿಲ್ಲಿಂಗ್, ಎಕ್ಸ್‌ರೇ ಟೆಕ್ನೀಷಿಯನ್, ಆಯಾ, ಮತ್ತು ವಾರ್ಡ್‌ಬಾಯ್, ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.
96633 06911

**ಮನೆ ಬಾಡಿಗೆಗೆ ಇದೆ**
1 BHK,
HKR ಸರ್ಕಲ್ ಹತ್ತಿರ.
ಸಂಪರ್ಕಿಸಿ :
99025 80751

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
1 ಎಕರೆ TO 20 ಎಕರೆ
ಹದಡಿ- ಲೋಕಿಕೆರೆ ಹತ್ತಿರ.
63608 66997

**ಸೈಟು ಮಾರಾಟಕ್ಕಿದೆ**
30x59 ದಕ್ಷಿಣ ಸೈಟು ಮಾರಾಟಕ್ಕಿದೆ (ಕಾರ್ನರ್ ಸೈಟಿನ ಪಕ್ಕ) ಹರಿಹರದ KHB ಲೇಔಟ್, ಅಮರಾವತಿ ಕಾಲೋನಿ. ಸಂಪರ್ಕಿಸಿ :
99802 00664, 94495 81264

**LIC OFFICE ನಿಂದ ಗೃಹ ಸಾಲಗಳು**
ಮನೆ ಕಟ್ಟಲು, ಕಾಂಪ್ಲೆಕ್ಸ್ ಕಟ್ಟಲು ಹಾಗೂ ಮನೆ, ಸೈಟ್ ಖರೀದಿಸಲು, ಮನೆ ರಿಪೇರಿ ಸಾಲ, ಅಡಮಾನ ಸಾಲ, ಬೇರೆ ಬ್ಯಾಂಕಿನಿಂದ ಟೇಕ್ ಓವರ್ ಸಾಲ ಸೌಲಭ್ಯವಿರುತ್ತದೆ.
ಎಸ್. ವಸಂತಕುಮಾರ್
91647 16836
81234 19488

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಮನೆ ಬಾಡಿಗೆಗೆ ಇದೆ**
2BHK ವಿದ್ಯಾನಗರ, 1ನೇ ಬಸ್ ಸ್ಟಾಪ್, ಪಾರ್ಕ್ ಹತ್ತಿರ.
ಸಂಪರ್ಕಿಸಿ :
95913 91049
63648 13491

**ನಾಯಿ ಮರಿಗಳು ದೊರೆಯುತ್ತವೆ**
ಒಂದು ತಿಂಗಳಿನ 'Shitzu' ತಳಿಯ ನಾಯಿ ಮರಿಗಳು ದೊರೆಯುತ್ತವೆ. ಸಂಪರ್ಕಿಸಿ :
94814 48639

**ಬೇಕಾಗಿದ್ದಾರೆ**
ಆನಗೋಡು ಸಮೀಪದ NH48ನಲ್ಲಿರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಮತ್ತು 20KL ಟ್ಯಾಂಕರ್ ಲಾರಿಯಲ್ಲಿ ಕಂಡಕ್ಟರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
90082 28222, 63606 11836

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 52x60 North-East, Corner site ಮಾರಾಟಕ್ಕಿವೆ, ( Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**'ಮಚ್ಚಿ' ಫಿಶ್ ಫ್ರೈ ಹೋಟೆಲ್**
ಸಮುದ್ರದ ತಾಜಾ ಮೀನುಗಳನ್ನು ಮಂಗಳೂರು ಶೈಲಿಯಲ್ಲಿ ತವಾ ಫ್ರೈ ಮಾಡಲಾಗುತ್ತದೆ. ಹಳೇ ಬೆತೂರು ರಸ್ತೆ, ಶ್ಯಾವಿಗೆ ಮೆಶಿನ್ ಹತ್ತಿರ, ದಾವಣಗೆರೆ.
63646 78760

**ಮಾರಾಟಕ್ಕಿದೆ**
ಪಿ.ಬಿ. ರಸ್ತೆಗೆ ಹರಿಹರದಲ್ಲಿ 15 ಗುಂಟೆ (NA LAND) ಮಾರಾಟಕ್ಕಿದೆ
@ RS. 2300 Per Sq.ft.
(Contact buyers only)
Sharma
63608 66997

**ಪಾರ್ಟನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್‌ಗೆ ಸ್ಲೀಪಿಂಗ್ ಪಾರ್ಟನರ್ ಆಗಿ ಪ್ರತಿ ತಿಂಗಳು ಉತ್ತಮ ಹಾಗೂ ಸ್ಥಿರವಾದ ಲಾಭ ಗಳಿಸಿ.
76767 50280

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ**
ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ, ವ್ಯವಹಾರ, ವೈವಾಹಿಕ, ಶತ್ರುಬಾಧೆ, ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮ ಬಾಣ.
80733 42011

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
BIET College Road, Siddaveerappa Badavane, 13th Cross, SLN Convent Building, Davanagere.
77603 16576
90080 55813

**WANTED**
B.Com / BA freshers for Office Work
Contact :
96325 54524

**ಮನೆಗಳು ಲೀಸ್‌ಗಿದೆ**
3BHK, 2BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪಾಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
88616 89590


# ಅದಾನಿ ವಿರುದ್ಧ ಇನ್ನಷ್ಟು ತನಿಖೆ ಅಗತ್ಯವಿಲ್ಲ : ಸುಪ್ರೀಂ

ನವದೆಹಲಿ, ಜ. 3 – ಅದಾನಿ ಸಮೂಹದ ವಿರುದ್ಧ ವಿಶೇಷ ತನಿಖಾ ತಂಡ ಇಲ್ಲವೇ ಸಿ.ಬಿ.ಐ. ಮೂಲಕ ಇನ್ನಷ್ಟು ತನಿಖೆ ನಡೆಸುವ ಅಗತ್ಯವಿಲ್ಲ. ಮಾರುಕಟ್ಟೆ ನಿಯಂತ್ರಕ ಸೆಬಿ ಇನ್ನು ಮೂರು ತಿಂಗಳಲ್ಲಿ ತನ್ನ ತನಿಖೆ ಪೂರ್ಣಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಅದಾನಿ ಸಮೂಹದ ವಿರುದ್ಧ ಅಮೆರಿಕದ ಹಿಂಡನ್‌ಬರ್ಗ್ ರೀಸರ್ಚ್ ಮಾಡಿರುವ ಆರೋಪಗಳ 3ನೇ ಪಾರ್ಟಿ ತನಿಖೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ, ಸೆಬಿ ಈ ವಿಷಯದಲ್ಲಿ ಸಮಗ್ರ ತನಿಖೆ ನಡೆ ಸುತ್ತಿದೆ. ಅದರ ಕ್ರಮಗಳು ವಿಶ್ವಾಸ ತರಿಸುವಂತಿವೆ ಎಂದು ಹೇಳಿದೆ.

ಅದಾನಿ ಸಮೂಹದ ವಿರುದ್ಧ ನಡೆಸುತ್ತಿರುವ ತನಿಖೆಗಳನ್ನು ಆಗಸ್ಟ್ 14, 2023ರ ಒಳಗೆ ಮುಗಿಸಬೇಕೆಂದು ಸುಪ್ರೀಂ ಕೋರ್ಟ್ ಈ ಹಿಂದೆ ಗಡುವು ನೀಡಿತ್ತು. ನಂತರ ಗಡುವನ್ನು ವಿಸ್ತರಿಸಲಾಗಿತ್ತು. ಬುಧವಾರ ಸುಪ್ರೀಂ ಕೋರ್ಟ್ ಎದುರು ಹಾಜರಾಗಿದ್ದ ಸೆಬಿ, 24 ವಿಷಯಗಳ ಪೈಕಿ 22ರಲ್ಲಿ ತನಿಖೆ ಪೂರ್ಣಗೊಂಡಿದೆ ಎಂದು ತಿಳಿಸಿತು. ಇನ್ನು 3 ತಿಂಗಳಲ್ಲಿ ಉಳಿದ 3 ಪ್ರಕರಣಗಳ ತನಿಖೆ ಪೂರ್ಣಗೊಳಿಸಲು ಸುಪ್ರೀಂ ಕೋರ್ಟ್ ಹೇಳಿದೆ.

## ಅಂಚೆ ಜನ ಸಂಪರ್ಕ ಅಭಿಯಾನ



ದಾವಣಗೆರೆ, ಜ. 3 - ನಗರದ ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನಲ್ಲಿರುವ ಉಪ ಅಂಚೆ ಕಚೇರಿಯಲ್ಲಿ ಜನ ಸಂಪರ್ಕ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಂಚೆ ಇಲಾಖೆಯ ದಾವಣಗೆರೆ ವಿಭಾಗದ ಅಂಚೆ ಅಧೀಕ್ಷಕ ಚಂದ್ರಶೇಖರ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಅಂಚೆ ಇಲಾಖೆಯ ದಾವಣಗೆರೆ ಉಪ ವಿಭಾಗ 1 - 2ರ ಸಹಾಯಕ ಅಧೀಕ್ಷಕ ನರೇಂದ್ರ ನಾಯ್ಕ ಭಾಗವಹಿಸಿದ್ದರು. ಸಪ್ತಗಿರಿ ಪಿ.ಯು. ಕಾಲೇಜಿನ ಕನ್ನಡ ಉಪನ್ಯಾಸಕ ವೆಂಕಟೇಶ್ ಮೂರ್ತಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಆಯೋಜಕರಾಗಿದ್ದ ಉಪ ಅಂಚೆ ಪಾಲಕ ಲಿಂಗನಾಯ್ಕ ಹಾಗೂ ಸಿಬ್ಬಂದಿ ವರ್ಗ ಭಾಗವಹಿಸಿದ್ದರು. ದಾನಪ್ಪ ಅಂಚೆ ಸಹಾಯಕರು ನಿರೂಪಿಸಿದರು. ಸಿ. ವಿನಯ್ ಸ್ವಾಗತಿಸಿದರು. ಶಬಾನ ವಂದಿಸಿದರು.

## ಸವಣೂರು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾಗಿ ವಾಸನದ ಮಹಾಂತೇಶ್



ಮಲೇಬೆನ್ನೂರು, ಜ.3- ರಾಜನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ವಾಸನದ ಮಹಾಂತೇಶ್ ಅವರು ಪದೋನ್ನತಿ ಪಡೆದು ಬುಧವಾರ ಸವಣೂರು ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾಗಿ ಅಧಿಕಾರ ವಹಿಸಿಕೊಂಡರು.

# ಪದವಿ, ಡಿಪ್ಲೋಮಾ ಉತ್ತೀರ್ಣರಾದವರಿಗೆ 5ನೇ ಗ್ಯಾರಂಟಿ ಯುವನಿಧಿ

### 12ರಂದು ಶಿವಮೊಗ್ಗದಲ್ಲಿ ಚಾಲನೆ, ದಾವಣಗೆರೆ ಜಿಲ್ಲೆಯಲ್ಲಿ ನೋಂದಣಿ ಅಭಿಯಾನ



ದಾವಣಗೆರೆ, ಜ.3- ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಯುವನಿಧಿ ಯೋಜನೆ ಇದೇ ದಿನಾಂಕ 12 ರಂದು ಶಿವಮೊಗ್ಗದಲ್ಲಿ ಚಾಲನೆಗೊಳ್ಳಲಿದ್ದು, ದಾವಣಗೆರೆ ಜಿಲ್ಲೆಯಲ್ಲಿ ಯುವನಿಧಿ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು ಮತ್ತು ಕಾಲೇಜು ಪ್ರಾಂಶುಪಾಲ ರೊಂದಿಗೆ ಇಂದು ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಅವರು ಮಾತನಾಡಿದರು.

ಇತ್ತೀಚಿನ 6 ತಿಂಗಳಗಿಂತ ಮೊದಲು ಪದವಿ ಉತ್ತೀರ್ಣ, ಡಿಪ್ಲೋಮಾ ಉತ್ತೀರ್ಣರಾದ ಯುವ ಪದವೀಧರರಿಗೆ ಮಾಸಿಕ 3 ಸಾವಿರ ಮತ್ತು ಡಿಪ್ಲೋಮಾ ಪಡೆದವರಿಗೆ ಮಾಸಿಕ 1500 ರೂ.ಗಳ ಯುವ ನಿಧಿಯನ್ನು ನೀಡಲಾಗುತ್ತಿದೆ. ಈ ಯೋಜನೆಗೆ ಈಗಾಗಲೇ ನೋಂದಣಿ ಆರಂಭವಾಗಿದೆ.

ಈವರೆಗೆ ಜಿಲ್ಲೆಯಲ್ಲಿ 500 ಜನರಿಗಿಂತ ಹೆಚ್ಚು ನೋಂದಣಿಯಾಗಿದ್ದು, ಜನವರಿ 12 ರೊಳಗಾಗಿ 10 ಸಾವಿರ ಪದವಿ, ಡಿಪ್ಲೋಮಾ ಪಡೆದ ಯುವ ಜನರನ್ನು ನೋಂದಣಿ ಮಾಡಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡುವ ದಿನ ಡಿಬಿಟಿ ಮೂಲಕ ಯೋಜನೆಯ ಲಾಭ ಕಲ್ಪಿಸಲು ನೋಂದಣಿಗೆ ಅಭಿಯಾನ ಮಾಡಲಾಗುತ್ತಿದೆ.

ಯುವನಿಧಿ ನೋಂದಣಿಯನ್ನು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಸೇವಾ ಸಿಂಧೂ ಪೋರ್ಟಲ್‌ನಲ್ಲಿ ನೋಂದಣಿ ಮಾಡಬಹುದಾಗಿದೆ. ಆದರೂ ಸಹ ಅಭಿಯಾನದ ಮೂಲಕ ಹೆಚ್ಚು ಜನರ ನೋಂದಣಿ ಮಾಡಲು ಹಾಗೂ ಯಾರೂ ಸಹ ಯೋಜನೆಯಿಂದ ಹೊರಗುಳಿಯಬಾರದೆಂದು ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್ ಕಚೇರಿ, ತಾಲ್ಲೂಕು ಪಂಚಾಯಿತಿಯಲ್ಲಿ ನೋಂದಣಿ ಅಭಿಯಾನವನ್ನು ಹೆಚ್ಚುವರಿಯಾಗಿ ಮಾಡಲಾಗುತ್ತದೆ ಮತ್ತು ತಾಂತ್ರಿಕ ಸಮಸ್ಯೆಗಳಿದ್ದಲ್ಲಿ ನಿವಾರಣೆಗಾಗಿ ದಾವಣಗೆರೆ ಪಾಲಿಕೆ ನಿಯಂತ್ರಣ ಕೊಠಡಿಯಲ್ಲಿ ಕಾಲ್ ಸೆಂಟರ್ ತೆರೆಯಲಾಗುತ್ತದೆ. ಮತ್ತು ಎಲ್ಲಾ ತಾಲ್ಲೂಕುಗಳಲ್ಲಿನ ತಾಲ್ಲೂಕು ಕಚೇರಿಯಲ್ಲಿ ಕಾಲ್ ಸೆಂಟರ್ ತಾತ್ಕಾಲಿಕವಾಗಿ ತೆರೆಯಲು ತಹಶೀಲ್ದಾರರಿಗೆ ಸೂಚನೆ ನೀಡಿದರು.

**ನೋಡಲ್ ಅಧಿಕಾರಿಗಳ ನೇಮಕ ;** ಯುವನಿಧಿ ಯೋಜನೆಗೆ ನೋಂದಣಿ ಮಾಡಿಸಲು ಎಲ್ಲಾ ತಾಲ್ಲೂಕಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದು ಎಲ್ಲಾ ಕಾಲೇಜುಗಳಲ್ಲಿಯು ಅಭಿಯಾನ ಮಾಡುವ ಮೂಲಕ ಯುವಕರಿಗೆ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಮತ್ತು ದಾವಣಗೆರೆ ವಿ.ವಿ. ಉತ್ತೀರ್ಣರಾದ ಅಂತಿಮ ಪದವಿ ವಿದ್ಯಾರ್ಥಿಗಳ ವಿವರವನ್ನು ನ್ಯಾಡ್‌ಗೆ ಅಪ್‌ಲೋಡ್ ಮಾಡಲು ಸೂಚನೆ ನೀಡಿದರು.

**ಶಿವಮೊಗ್ಗಕ್ಕೆ 10 ಸಾವಿರ ಯುವನಿಧಿ ಫಲಾನುಭವಿಗಳು :** ಯುವನಿಧಿ ಯೋಜನೆಗೆ ಜನವರಿ 12 ರಂದು ಶಿವಮೊಗ್ಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರು ಚಾಲನೆ ನೀಡುವ ಮೂಲಕ ನೋಂದಣಿಯಾದವರಿಗೆ ನೇರವಾಗಿ ಡಿಬಿಟಿ ಮೂಲಕ ಮಾಸಿಕ ಶಿಷ್ಯವೇತನಕ್ಕೆ ಚಾಲನೆ ನೀಡಲಿದ್ದು, ದಾವಣಗೆರೆ ಜಿಲ್ಲೆಯಿಂದ 10 ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಭಾಗವಹಿಸಲು ಕಳುಹಿಸಿಕೊಡಲಾಗುತ್ತದೆ. ಇದಕ್ಕಾಗಿ ಎಲ್ಲಾ ತಾಲ್ಲೂಕುಗಳಿಂದ ಕರೆದುಕೊಂಡು ಹೋಗಿ ಬರಲು ವಾಹನದ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

**ಅರ್ಜಿ ಹಾಕುವ ವಿಧಾನ :** ಸೇವಾಸಿಂಧೂ ಪೋರ್ಟಲ್‌ಗೆ ಹೋಗಿ ಮೆನುನಲ್ಲಿ ಕ್ಲಿಕ್ ಅಪ್ಲಿಕೇಷನ್ ಸರ್ವೀಸಸ್, ಎಲ್ಲಾ ಸೇವೆಗಳು ತೆರೆದುಕೊಳ್ಳುತ್ತವೆ. ಇಲ್ಲಿ ಯುವನಿಧಿ ಅರ್ಜಿ ಕ್ಲಿಕ್ ಮಾಡಬೇಕು. ನಂತರ ಅರ್ಜಿ ಪುಟ ತೆರೆದುಕೊಳ್ಳುತ್ತದೆ.

ಇಲ್ಲಿ ವಿದ್ಯಾರ್ಥಿಯ ಸ್ವಯಂ ಘೋಷಣೆ 'ಯಸ್' ಅಥವಾ 'ನೋ' ಇದರಲ್ಲಿ 6 ಅರ್ಹತೆಗಳನ್ನು ಹೊಂದಿರಬೇಕು. ನಂತರ ಆಧಾರ್ ದೃಢೀಕರಣ ಮಾಡಬೇಕು. ಆಧಾರ್ ಮಾಹಿತಿ ಬಾಕ್ಸ್ ಚೆಕ್ ಮಾಡಿ, ನಂತರ ಓಟಿಪಿ ಜನರೇಟ್ ಮಾಡಬೇಕು, ನಂತರ ಮೊಬೈಲ್‌ಗೆ ಓಟಿಪಿ ಬರುತ್ತದೆ.

ನಂತರ ಎಲ್ಲಾ ವಿವರ ಅರ್ಜಿಗೆ ಆಧಾರ್‌ನಂತೆ ತೆರೆದುಕೊಳ್ಳಲಿದ್ದು ಸಬ್‌ಮಿಟ್ ಮಾಡಬೇಕು. ವಿಳಾಸ ಸರಿಯಿದ್ದಲ್ಲಿ ಯಥಾವತ್ತು, ಇಲ್ಲದಿದ್ದಲ್ಲಿ ಅರ್ಜಿದಾರರ ತಾಲ್ಲೂಕು, ಜಿಲ್ಲೆ ಟೈಪ್ ಮಾಡಬೇಕು. ನಂತರ ನಾಡ್‌ನಲ್ಲಿ ಪದವಿ ಶಿಕ್ಷಣದ ಪ್ರಮಾಣ ಪತ್ರದ ಸಂಖ್ಯೆ ಟೈಪ್ ಮಾಡಿದಲ್ಲಿ ವಿವರ ಸ್ವಯಂಪ್ರೇರಿತವಾಗಿ ತೆರದುಕೊಳ್ಳುತ್ತದೆ. ಶಿಕ್ಷಣದ ವಿವರ ದಾಖಲು ಮಾಡಬೇಕು ಇದು ಅರ್ಜಿ ನೋಂದಣಿಯ ವಿವಿಧ ಹಂತಗಳಾಗಿರುತ್ತವೆ.

ವೀಡಿಯೋ ಕಾನ್ಫರೆನ್ಸ್‌ನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಜಿಲ್ಲಾ ಉದ್ಯೋಗಾಧಿಕಾರಿ ಡಿ. ರವೀಂದ್ರ ಉಪಸ್ಥಿತರಿದ್ದರು.

# ಅತಿಥಿ ಶಿಕ್ಷಕರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸಮಾವೇಶ



### ರಾಜ್ಯ ಮಟ್ಟದ ಅತಿಥಿ ಶಿಕ್ಷಕರ ನಾಯಕತ್ವ ಶಿಬಿರದಲ್ಲಿ ನಿರ್ಣಯ

ಮಲೇಬೆನ್ನೂರು, ಜ.3- ಹನಗವಾಡಿ ಬಳಿ ಇರುವ ಪ್ರೊ. ಬಿ. ಕೃಷ್ಣಪ್ಪ ಭವನದಲ್ಲಿ ಕಳೆದ ವಾರ ರಾಜ್ಯ ಮಟ್ಟದ ಅತಿಥಿ ಶಿಕ್ಷಕರ ನಾಯಕತ್ವ ಶಿಬಿರ ನಡೆಯಿತು.

ಸಂವಿಧಾನದ ಪೀಠಿಕೆಯನ್ನು ಓದಿಸುವುದರ ಮೂಲಕ ಶಿಬಿರವನ್ನು ನ್ಯಾಯವಾದಿ ಅನಂತ್ ನಾಯ್ಕ್ ಉದ್ಘಾಟಿಸಿದರು.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ್ ಕರಡಿಗುಡ್ಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಣ ತಜ್ಞ ನಿರಂಜನಾರಾಧ್ಯ ಅವರು ಪ್ರಸ್ತುತ ಇರುವ ಮಕ್ಕಳ ಶಿಕ್ಷಣ ನೀತಿ ಹಾಗೂ ಅತಿಥಿ ಶಿಕ್ಷಕರ ಸಮಸ್ಯೆ ಮತ್ತು ಪರಿಹಾರದ ಕುರಿತು ವಿಶೇಷ ಉಪನ್ಯಾಸ ಹಾಗೂ ಮಾಹಿತಿ ನೀಡಿದರು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ ಎ.ಬಿ. ರಾಮಚಂದ್ರಪ್ಪ ಅವರು, ಸಂಘ-ಸಂಘಟನೆ ಹಾಗೂ ಅತಿಥಿ ಶಿಕ್ಷಕರ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿದರು. ವಿದ್ಯಾರ್ಥಿ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕರಾದ ತೋಳಿ ಭರಮಣ್ಣ, ಜಿ.ಎನ್. ಶರತ್, ಅತಿಥಿ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಎಸ್. ಹನುಮಂತ್ ಹಾಗೂ ಇತರರು ಶಿಬಿರದಲ್ಲಿ ಉಪಸ್ಥಿತರಿದ್ದರು.

**ಅತಿಥಿ ಶಿಕ್ಷಕರ ರಾಜ್ಯ ನಾಯಕತ್ವ ಶಿಬಿರದಲ್ಲಿ ಕೈಗೊಂಡ ನಿರ್ಣಯಗಳು :**

ಅತಿಥಿ ಶಿಕ್ಷಕರ ವೇತನ, ಮತ್ತಿತರ ವಿಚಾರಗಳು ಜಿಲ್ಲಾ ಉಸ್ತುವಾರಿ ಸಚಿವರ ವ್ಯಾಪ್ತಿಯಲ್ಲಿ ಬರುತ್ತವೆ. ನಮ್ಮ ಬೇಡಿಕೆಗಳನ್ನು ಸಚಿವರಿಗೆ, ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ಹಾಗಾಗಿ ಜನವರಿ ತಿಂಗಳಲ್ಲಿ ಅತಿಥಿ ಶಿಕ್ಷಕರ ಜಿಲ್ಲಾ ಸಮಾವೇಶಗಳನ್ನು ಸಮುದಾಯ ಭವನಗಳಲ್ಲಿ ಆಯೋಜಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಮ್ಮ ಪರ ಇರುವಂತಹ ಶಾಸಕರು ಮತ್ತು ರಾಜ್ಯ ಸಮಿತಿಯ ಮುಖಂಡರನ್ನು ಆಹ್ವಾನಿಸಿ ಸಮಾವೇಶ ನಡೆಸಬೇಕು. ಸಮಾವೇಶದಲ್ಲಿ ನಮ್ಮ ಹಕ್ಕೊತ್ತಾಯಗಳನ್ನು ಸಚಿವರಿಗೆ ಸಲ್ಲಿಸಬೇಕು. ಜಿಲ್ಲೆಯ ಎಲ್ಲಾ ಅತಿಥಿ ಶಿಕ್ಷಕರು ಈ ಸಮಾವೇಶದಲ್ಲಿ ಭಾಗವಹಿಸಬೇಕು. ಇದಕ್ಕಾಗಿ ತಕ್ಷಣ ಜಿಲ್ಲಾ, ತಾಲ್ಲೂಕು ಸಮಿತಿಗಳ ಸಭೆಗಳನ್ನು ಕರೆದು ತಯಾರಿ ಪ್ರಾರಂಭಿಸಬೇಕು. ವಿಭಾಗದ ಸಂಚಾಲಕರು ಈ ಸಭೆಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಬೇಕು.

ತಾಲ್ಲೂಕು, ಜಿಲ್ಲಾ ಪದಾಧಿಕಾರಿಗಳು ಶಾಲೆಗಳ ಮಾಹಿತಿಯನ್ನು ತೆಗೆದು ಕೊಂಡು ಕ್ಲಸ್ಟರ್ ಹಂತದಿಂದ ಅತಿಥಿ ಶಿಕ್ಷಕರನ್ನು ಕರೆತರಬೇಕು.

ರಾಜ್ಯ ಸರ್ಕಾರದ ಬಜೆಟ್ ಪೂರ್ವದಲ್ಲಿ ಈ ಬೇಡಿಕೆಗಳನ್ನು ಸರ್ಕಾರಕ್ಕೆ ಅರ್ಥ ಮಾಡಿಸಬೇಕು. ಹಾಗಾಗಿ ಅತಿಥಿ ಶಿಕ್ಷಕರ ರಾಜ್ಯ ಸಮಾವೇಶವನ್ನು ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ಬೆಂಗಳೂರಿನಲ್ಲಿ ಆಯೋಜಿಸಬೇಕಿದೆ. ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಕರೆಯಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

# ಭಾವೈಕ್ಯತೆ ರಾಷ್ಟ್ರೋತ್ಥಾನದ ಮಾರ್ಗದರ್ಶಿ



### ಪ್ರೊ. ಚನ್ನಪ್ಪ ಪಲ್ಲಾಗಟ್ಟೆ

ದಾವಣಗೆರೆ, ಜ. 3 - ಭಾವೈಕ್ಯತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಅದನ್ನು ಪಾಲಿಸುವುದರ ಮೂಲಕ ನಮ್ಮ ರಾಷ್ಟ್ರವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯಬಹುದು. ಯುವಕರನ್ನು ಭಾರತದ ಆದರ್ಶ ನಾಗರಿಕರನ್ನಾಗಿ ಮಾಡಲು ಅವರಲ್ಲಿ ಸೇವಾ ಮನೋಭಾವ, ಸಂಯಮ, ಧೈರ್ಯ, ತ್ಯಾಗ, ಸರಳತೆಯನ್ನು ಮೂಡಿಸುವ ಅನಿವಾರ್ಯತೆ ಇದೆ ಎಂದು ಭಾರತ ಸೇವಾದಳ ಜಿಲ್ಲಾಧ್ಯಕ್ಷ ಪ್ರೊ. ಚನ್ನಪ್ಪ ಪಲ್ಲಾಗಟ್ಟೆ ತಿಳಿಸಿದರು.

ಸೇವಾದಳದ ಶತಮಾನೋತ್ಸವ ಸ್ಮರಣೆಯ ಅಂಗವಾಗಿ ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಭಾರತ ಸೇವಾದಳ ನೇತಾಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಭಾರತ ಸೇವಾದಳ ಸಪ್ತಾಹ ಶಿಬಿರದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ತತ್ವ, ಆದರ್ಶ ಮತ್ತು ಕಾರ್ಯಕ್ರಮಗಳ ತಳಹದಿಯ ಮೇಲೆ ಯುವಕರನ್ನು ಸಂಘಟಿಸಿ, ಸೇವಾದಳದ ಶಿಕ್ಷಣದ ಮೂಲಕ ಪೂರ್ಣ ಸೇವಾ ಮನೋಭಾವನೆ ಮೂಡಿಸುವ ಹಾಗೂ ಆರೋಗ್ಯ ಮತ್ತು ಶಾರೀರಿಕ ದೃಢತೆಯನ್ನು ಬಲಪಡಿಸುವ ಕಾರ್ಯವನ್ನು ಮಾಡಲು ಕರೆಕೊಟ್ಟರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀಮತಿ ಸುಮಿತ್ರಮ್ಮ ಮಾತನಾಡಿ, ಮಕ್ಕಳಿಗೆ ಶಿಸ್ತಿನ ಬಗ್ಗೆ ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷ ವಿಜಯ್ ವಹಿಸಿದ್ದರು.

ವೇದಿಕೆಯಲ್ಲಿ ಭಾರತ ಸೇವಾದಳ ದಾವಣಗೆರೆ ತಾಲ್ಲೂಕು ಅಧ್ಯಕ್ಷ ಹಾಸಬಾವಿ ಕರಿಬಸಪ್ಪ, ಶಿಕ್ಷಕ ಗಣೇಶಯ್ಯ, ಶ್ರೀಮತಿ ಕವಿತಮ್ಮ, ಶ್ರೀಮತಿ ವಸಂತಮ್ಮ ಹಾಜರಿದ್ದರು. ದೈಹಿಕ ಶಿಕ್ಷಕ ಎ.ಆರ್. ಗೋಪಾಲಪ್ಪ ಸ್ವಾಗತಿಸಿದರು. ಕವಿತಮ್ಮ ವಂದಿಸಿದರು.

ಭಾರತ ಸೇವಾದಳದ ಜಿಲ್ಲಾ ಸಂಘಟಕ ಫಕ್ಕೀರಗೌಡ ಹಳೇಮನಿ ಕಾರ್ಯ ಕ್ರಮದ ನಿರ್ವಹಣೆ ಜೊತೆಗೆ ದೇಶಭಕ್ತಿ ಗೀತೆ ಕಾರ್ಯ ಕ್ರಮ ನಡೆಸಿಕೊಟ್ಟರು.

## ನಗರದಲ್ಲಿಂದು ಕರುಣಾ ಟ್ರಸ್ಟ್‌ನಿಂದ ಸಂವಾದ ಕಾರ್ಯಕ್ರಮ

ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಇಂದು ಗುರುವಾರ ಸಂಜೆ 6 ಗಂಟೆಗೆ ಶ್ರೀ ಸಿದ್ದೇಶ್ವರ ಸ್ವಾಮಿಯವರ ಸತ್‌ಚಿಂತನೆಗಳ ಸ್ಮರಣೆ ವಿಷಯವಾಗಿ, ಚಿಂತಕ ಶಿವನಕೆರೆ ಬಸವಲಿಂಗಪ್ಪ ಅವರಿಂದ ಚಿಂತನೆ ಮತ್ತು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಪ್ರೊ. ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಬಾದಿ ಬಸವರಾಜ್ ಇವರುಗಳು ಭಾಗವಹಿಸಲಿದ್ದಾರೆ.

## ಕುಣೆಬೆಳಕೆರೆಯಲ್ಲಿ ಇಂದು ದಂತ ತಪಾಸಣೆ, ಸಲಹಾ ಕಾರ್ಯಕ್ರಮ

ಬಾಪೂಜಿ ಪ್ರೌಢಶಾಲೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಮಲೇಬೆನ್ನೂರು ಲಯನ್ಸ್ ಕ್ಲಬ್ ಹಾಗೂ ದಾವಣಗೆರೆ ಬಾಪೂಜಿ ದಂತ ವೈದ್ಯಕೀಯ ಕಾಲೇಜ್ ಮತ್ತು ಆಸ್ಪತ್ರೆ ವತಿಯಿಂದ ಇಂದು ಬೆಳಗ್ಗೆ 10.30 ಕ್ಕೆ ಉಚಿತ ದಂತ ತಪಾಸಣೆ, ಸಲಹೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ತಿಳಿಸಿದ್ದಾರೆ.

## ಬೇಸಿಕ್, ಅಡ್ವಾನ್ಸ್ ಕೋರ್ಸ್ ತರಬೇತಿ

ದಾವಣಗೆರೆ, ಜ. 3 - ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಪ್ರಸಕ್ತ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ಬೇಸಿಕ್ ಮತ್ತು ಅಡ್ವಾನ್ಸ್ ಕೋರ್ಸ್ ಕುರಿತಾದ ತರಬೇತಿ ನೀಡಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ಅಭ್ಯರ್ಥಿಗಳು ನಾಡಿದ್ದು ದಿನಾಂಕ 5 ರೊಳಗಾಗಿ ಆನ್‌ಲೈನ್ www.dom.karanataka.gov.in ನಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಅಲ್ಪಸಂಖ್ಯಾತರ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

## ವಿದ್ಯಾರ್ಥಿಗಳು ಜ್ಞಾನ, ಹಣ ಸಂಪಾದನೆ ಉದ್ದೇಶಕ್ಕಿಂತ ತಂದೆ-ತಾಯಿಗಳಿಗೆ ಗೌರವ ನೀಡುವುದನ್ನು ಕಲಿಯಬೇಕು

### ವಿಜ್ಞಾನ ಅಕಾಡೆಮಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಬಿ.ಎನ್. ಮಲ್ಲೇಶ್



ದಾವಣಗೆರೆ, ಜ.3- ಇಂದಿನ ವಿದ್ಯಾರ್ಥಿಗಳು ಜ್ಞಾನ ಸಂಪಾದನೆ ಮತ್ತು ಹಣ ಸಂಪಾದನೆ ಉದ್ದೇಶಕ್ಕಿಂತ ಮುಖ್ಯವಾಗಿ ತಂದೆ-ತಾಯಿಗಳಿಗೆ ಗೌರವ ನೀಡುವುದನ್ನು ಕಲಿಯಬೇಕು ಎಂದು ಹಿರಿಯ ಪತ್ರಕರ್ತ - ಸಾಹಿತಿ ಬಿ.ಎನ್. ಮಲ್ಲೇಶ್ ಹೇಳಿದರು.

ನಗರದ ಬಿ.ಐ.ಇ.ಟಿ ಇಂಜಿನಿಯರಿಂಗ್ ಕಾಲೇಜಿನ ಎಸ್. ಎಸ್. ಎಂ. ಸಾಂಸ್ಕೃತಿಕ ಸಭಾಂಗಣದಲ್ಲಿ, ವಿಜ್ಞಾನ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಯಾವುದೇ ಶಿಕ್ಷಣ ಸಂಸ್ಥೆ ಗುಣಮಟ್ಟದ, ಸಂಸ್ಕೃತಿ, ಸಂಸ್ಕಾರದ ಹಾಗೂ ಮಾನವೀಯ ಮೌಲ್ಯಧಾರಿತ ಶಿಕ್ಷಣ ನೀಡುವುದು ಅತ್ಯವಶ್ಯಕ. ಇಂದಿನ ವೈದ್ಯಕೀಯ ವಿದ್ಯಾರ್ಥಿಗಳು ಹೊಸ ಸಂಶೋಧನೆಗಳನ್ನು ಮಾಡುವಂತಹ ವೈದ್ಯರಾಗಬೇಕು. ಅಂತಹ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಗಳು ನಿರ್ಮಿಸಬೇಕು ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಮುಖ್ಯಸ್ಥ ಸಂಜಯ್ ಗೌಡರ್ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಸಂಶೋಧನಾ ಮನೋಭಾವನೆಯನ್ನು ಹೊಂದಿರಬೇಕು. ಏಕೆಂದರೆ ನಮ್ಮ ದೇಶಕ್ಕೆ ಸಂಶೋಧನೆ ಮುಖ್ಯ. ಹೊಸ ವಿಷಯ, ಹೊಸ ತಂತ್ರಜ್ಞಾನ ಪಡೆದ ಒಳ್ಳೆಯ ಇಂಜಿನಿಯರ್ ಮತ್ತು ಒಳ್ಳೆಯ ವೈದ್ಯರನ್ನು ತಯಾರಿಸಬೇಕಾಗಿದೆ. ಜೀವನದ ಪ್ರಮುಖ ಘಟ್ಟ ಪಿಯುಸಿ. ಆದ ಕಾರಣ ವಿದ್ಯಾರ್ಥಿಗಳು ಬೇಕಾದ್ದನ್ನು ತೆಗೆದುಕೊಂಡು, ಬೇಡವಾದ್ದನ್ನು ಬಿಟ್ಟು ಸಿಕ್ಕ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಅತಿಥಿಗಳಾದ ಸತೀಶ್ ಜಿ.ಎಸ್., ಭುವನೇಶ್ವರ್ ಬಿ. ಎಲ್., ಸಂತೋಷ್‌ಕುಮಾರ್ ಎಂ., ಹಾಗೂ ಇತರರು ಭಾಗವಹಿಸಿದ್ದರು.

## ಇರಾನ್‌ನಲ್ಲಿ ನಡೆದ ಎರಡು ಬಾಂಬ್ ಸ್ಫೋಟಗಳಲ್ಲಿ 103 ಸಾವು, 188 ಜನರಿಗೆ ಗಾಯ

ದುಬೈ, ಜ. 3 – ಅಮೆರಿಕದ ಡ್ರೋನ್ ದಾಳಿಯಲ್ಲಿ ಹತರಾಗಿದ್ದ ಇರಾನ್‌ನ ಪ್ರಮುಖ ಜನರಲ್ ಒಬ್ಬರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಎರಡು ಬಾಂಬ್‌ಗಳು ಸ್ಫೋಟಗೊಂಡಿದ್ದು, 103 ಜನ ಸಾವನ್ನಪ್ಪಿದ್ದಾರೆ ಹಾಗೂ ಕನಿಷ್ಠ 188 ಜನ ಗಾಯಗೊಂಡಿದ್ದಾರೆ. ಇರಾನ್ ಮೇಲೆ ನಡೆದ ಈ ತೀವ್ರ ಬಾಂಬ್ ದಾಳಿಯ ಹೊಣೆಯನ್ನು ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. 1979ರ ನಂತರ ಇಷ್ಟು ದೊಡ್ಡ ದಾಳಿ ನಡೆಯುತ್ತಿರುವುದು ಇದೇ ಮೊದಲು. ಕೆರ್ಮನ್ ಎಂಬ ನಗರದಲ್ಲಿ ಈ ಸ್ಫೋಟಗಳು ಸಂಭವಿಸಿವೆ.

ಜನರಲ್ ಕಾಸಿಮ್ ಸುಲೇಮಾನಿ ಅವರು ಕ್ವಾಡ್ಸ್ ಫೋರ್ಸ್ ಮುಖ್ಯಸ್ಥರಾಗಿದ್ದರು. ಜನವರಿ 2020ರಲ್ಲಿ ಅಮೆರಿಕ ನಡೆಸಿದ ಡ್ರೋನ್ ದಾಳಿಯಲ್ಲಿ ಅವರು ಹತರಾಗಿದ್ದರು.

ಶ್ರದ್ಧಾಂಜಲಿ ಸಲ್ಲಿಸಲು ದೊಡ್ಡ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಮಧ್ಯಾಹ್ನ 3 ಗಂಟೆ ಸಮಯದಲ್ಲಿ ಮೊದಲ ಸ್ಫೋಟ ಸಂಭವಿಸಿತು. 20 ನಿಮಿಷಗಳ ನಂತರ ಎರಡನೇ ಸ್ಫೋಟ ಸಂಭವಿಸಿದೆ.

ಇರಾನ್ ಇತ್ತೀಚಿನ ದಿನಗಳಲ್ಲಿ ಗಾಜಾದ ಹಮಾಸ್, ಲೆಬನಾನ್‌ನ ಹೆಜ್ಬೊಲ್ಲಾ ಹಾಗೂ ಯೆಮೆನ್‌ನ ಹೌತಿ ಸೇರಿದಂತೆ ಹಲವು ಉಗ್ರರಿಗೆ ನೆರವಾಗುತ್ತಾ ಬಂದಿದೆ. ಗಾಜಾ ಮೇಲೆ ಇಸ್ರೇಲ್ ದಾಳಿ ಆರಂಭಿಸಿದ ನಂತರ ಇಡೀ ಪ್ರದೇಶ ಪ್ರಕ್ಷುಬ್ಧವಾಗಿದೆ.

## ವಿಹಿಂಪ ಮುಖಂಡನ ಬಿಡುಗಡೆಗೆ ಆಗ್ರಹ



ದಾವಣಗೆರೆ,ಜ.3- ಹುಬ್ಬಳ್ಳಿಯಲ್ಲಿ ಬಂಧನಕ್ಕೊಳಗಾಗಿರುವ ವಿಶ್ವ ಹಿಂದೂ ಪರಿಷತ್ ಮುಖಂಡ ಶ್ರೀಕಾಂತ್ ಪೂಜಾರಿ ಬಿಡುಗಡೆಗೆ ಆಗ್ರಹಿಸಿ ಮತ್ತು ರಾಜ್ಯಾದ್ಯಂತ ರಾಮಭಕ್ತರ ಮೇಲೆ ಪೊಲೀಸ್ ಇಲಾಖೆಯಿಂದ ಆಗುತ್ತಿರುವ ದೌರ್ಜನ್ಯವನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸಿ, ಇಂದು ಬೆಳಿಗ್ಗೆ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಜಿಲ್ಲಾ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಸಂಸದ ಜಿ.ಎಂ ಸಿದ್ದೇಶ್ವರ, ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರೇಶ್ ಹನಗವಾಡಿ, ಜಗಳೂರು ಮಾಜಿ ಶಾಸಕವ ಎಸ್.ವಿ. ರಾಮಚಂದ್ರ, ಉಪಾಧ್ಯಕ್ಷರಾದ ಮಂಜಾ ನಾಯಕ, ಶ್ರೀನಿವಾಸ್ ದಾಸಕರಿಯಪ್ಪ, ಮಹಾನಗರ ಪಾಲಿಕೆ ಸದಸ್ಯರುಗಳಾದ ಶಿವಾನಂದ, ಶಿವಪ್ರಕಾಶ್, ಪ್ರಸನ್ನಕುಮಾರ್, ಜಯಪ್ರಕಾಶ್, ಎಚ್.ಎನ್ ಶಿವಕುಮಾರ್, ಕೃಷ್ಣಮೂರ್ತಿ ಪವಾರ್, ಬಾತಿ ವೀರೇಶ್, ವಿಶ್ವಾಸ್ ಹೆಚ್. ಪಿ, ಬಿ.ಟಿ. ಶ್ಯಾಮ್, ಕೊಟ್ರೇಶ್ ಗೌಡ, ಕಿಶೋರ್, ಹಾಲೇಶ್, ಗಂಗಾಧರ್, ಅತಿಥ್, ವಿನಯ್, ನೀಲಗುಂದ ರಾಜು, ಶಾಮನೂರು ರಾಜು, ಮಂಜಣ್ಣ, ಶಾಮನೂರು ಹರೀಶ್, ರಾಜೇಶ್ ಕೆ, ಮತ್ತು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## PUBLIC NOTICE

Notice is hereby given that **SRI. I.P. MALLOKARADHYA, Proprietor M/S ARADHYA CONCRETE PRODUCTS** is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE-570 002,** within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

**SCHEDULE PROPERTY**: Plot No.301 and 302 in Hebbal Industrial Area, situated in Survey Numbers 110, 112, and 113 of Hebbal Village, Kasaba Hobli, Mysore Taluk, Mysore District, admeasuring 19,508 Square Meters or thereabouts and bounded on North by Plot No.303, South by Civic amenities and Green Belt, East by Hebbal Tank and Green Belt and on West by KIADB Road.

Sd/-

Date : 03.01.2024
Place: Mysore

**Dhirendra Kumar R. Mehta**
Advocate
**KEY-ANS LAW SOLUTIONS**

## ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪವಿಭಾಗ ಆಂಜನೇಯ ದೇವಸ್ಥಾನದ ಎದುರು, ವಿದ್ಯಾನಗರ, ದಾವಣಗೆರೆ ಇವರ ನ್ಯಾಯಾಲಯ

### ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರ ಅಡಿಯಲ್ಲಿ ಎದುರು ಅರ್ಜಿದಾರರುಗಳಿಗೆ ನೀಡಲಾದ ನೋಟೀಸ್

| ಕ್ರ. ಸಂ. | ದಾವಾ ಸಂಖ್ಯೆ | ದಾವಾ ಮೊತ್ತ | ಎದುರುದಾರರು |
|---|---|---|---|
| 1 | ಡಿ.ಆರ್./ಡಿವಿಜಿ/ 133/2023-24 | 4,41,940-00 | ಅಂಜಿನಪ್ಪ ಬಿ.ಕೆ. ಬಿನ್ ಬಿ. ಕರಿಬಸಪ್ಪ, ಹಾಲಿವಾಣ, ಹರಿಹರ ತಾ॥ ದಾವಣಗೆರೆ ಜಿಲ್ಲೆ. |
| 2 | ಡಿ.ಆರ್./ಡಿವಿಜಿ/ 105/2023-24 | 15,55,832-00 | ನಾಗರಾಜ ಹೆಚ್.ಸಿ. ಬಿನ್ ಚಂದ್ರಪ್ಪ ಹೆಚ್.ಜಿ. ಡೋರ್ ನಂ. 1790/25, 5ನೇ ಕ್ರಾಸ್, ಎಸ್.ಎಸ್. ಲೇ ಔಟ್, ದಾವಣಗೆರೆ-4. |
| 3 | ಡಿ.ಆರ್./ಡಿವಿಜಿ/ 127/2023-24 | 4,57,334-00 | ಶ್ರೀಮತಿ ಸರೋಜ ಬಿ.ಆರ್. ಕೋಂ. ಕಿರಣ್‌ಕುಮಾರ್ ಡೋರ್ ನಂ. 285, 5ನೇ ಕ್ರಾಸ್, ದೇವರಾಜ ಅರಸು ಬಡಾವಣೆ ಕೋರ್ಟ್ ಹಿಂಭಾಗ, 'ಎ' ಬ್ಲಾಕ್, ದಾವಣಗೆರೆ. |
| 4 | ಡಿ.ಆರ್./ಡಿವಿಜಿ/ 120/2023-24 | 3,38,568-00 | ನಾಗೇಂದ್ರ ಹೆಚ್. ಬಿನ್ ಹೊನ್ನೂರಪ್ಪ, ಕೊರಚರಹಟ್ಟಿ, ಬೇತೂರು ರಸ್ತೆ, ಇಂದಿರಾ ನಗರ, ದಾವಣಗೆರೆ. |

ಈ ನ್ಯಾಯಾಲಯದಲ್ಲಿ ಅರ್ಜಿದಾರರಾದ ಪ್ರಧಾನ ವ್ಯವಸ್ಥಾಪಕರು ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ ಇವರು ಈ ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 4ರವರೆಗಿನ ದಾವಾ ಪ್ರಕರಣದಲ್ಲಿ ಎದುರುದಾರರಾದ ನಿಮ್ಮಗಳ ವಿರುದ್ಧ ಕರ್ನಾಟಕ ಸಹಕಾರ ಕಾಯ್ದೆ 1959ರ ಕಲಂ 70ರ ಅಡಿಯಲ್ಲಿ ದಾವಾ ದಾಖಲಿಸಿರುತ್ತಾರೆ. ಪ್ರಯುಕ್ತ ಪ್ರಕರಣದ ಇತ್ಯರ್ಥಕ್ಕಾಗಿ ನೋಂದಣಿ ಅಂಚೆಯ ಮೂಲಕ ನಿಮಗೆ ನೋಟೀಸ್ ಕಳಿಸಿದ್ದರೂ ಸಹ ನ್ಯಾಯಾಲಯಕ್ಕೆ ಗೈರು ಹಾಜರಾಗಿರುತ್ತೀರಿ. ಆದ ಕಾರಣ ಅಂತಿಮವಾಗಿ ಸದರಿ ಪ್ರಕರಣಗಳ ವಿಚಾರಣೆಗಾಗಿ ದಿನಾಂಕ 11-01-2024ರ ಮಧ್ಯಾಹ್ನ 12.00 ಕ್ಕೆ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ತಮ್ಮ ಗೈರು ಹಾಜರಿಯಲ್ಲಿ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ವ್ಯಾಜ್ಯವನ್ನು ತೀರ್ಮಾನಿಸಲಾಗುವುದೆಂದು ತಿಳಿಯತಕ್ಕದ್ದು.

ಈ ನೋಟೀಸನ್ನು ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿನಾಂಕ 03-01-2024ರಂದು ನೀಡಲಾಗಿದೆ.

ಸಹಿ/-
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ದಾವಣಗೆರೆ ಉಪವಿಭಾಗ, ದಾವಣಗೆರೆ

# 6-7ರಂದು ಎಸ್‌ಯುಸಿಐ ಏಳನೇ ರಾಜ್ಯ ಸಮ್ಮೇಳನ

ದಾವಣಗೆರೆ, ಜ. 3- ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದ ಇದೇ ದಿನಾಂಕ 6 ಮತ್ತು 7 ರಂದು ಎರಡು ದಿನಗಳ ಕಾಲ ನಗರದಲ್ಲಿ ಏಳನೇ ರಾಜ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ರಾಜ್ಯಾಧ್ಯಕ್ಷರಾದ ಬಿ.ಆರ್. ಅಪರ್ಣಾ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಿನಾಂಕ 6 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಯದೇವ ವೃತ್ತದಿಂದ ಆಯೋಜಿಸಿರುವ ಮೆರವಣಿಗೆಗೆ ಕೆನರಾ ಬ್ಯಾಂಕ್ ಸ್ಟ್ಯಾಫ್ ಫೆಡರೇಷನ್ ಮಾಜಿ ಅಧ್ಯಕ್ಷ ಎಂ.ಆರ್. ಹಿರೇಮಠ ಚಾಲನೆ ನೀಡಲಿದ್ದಾರೆ. ಶ್ರೀ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಮೆರವಣಿಗೆ ಆಗಮಿಸಲಿದೆ ಎಂದು ಹೇಳಿದರು.

ಬೆಳಿಗ್ಗೆ 10.30 ಕ್ಕೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಛಾಯಾಚಿತ್ರ ಪ್ರದರ್ಶನಕ್ಕೆ ನಿವೃತ್ತ ಪ್ರಾಚಾರ್ಯ ಕೆ.ಎಸ್. ಈಶ್ವರಪ್ಪ ಚಾಲನೆ ನೀಡಲಿದ್ದಾರೆ. ನಂತರ ಬೆಳಿಗ್ಗೆ 11 ಕ್ಕೆ ಬಹಿರಂಗ ಅಧಿವೇಶನಕ್ಕೆ ಲೇಖಕರಾದ ರೂಪ ಹಾಸನ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ ಆಗಮಿಸಲಿದ್ದು, ಎಐಎಂಎಸ್‌ಎಸ್ ನ ಛಬ್ಬಿ ಮೊಹಂತಿ, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷೆ ಡಾ. ಪಿ.ಎಂ. ಅನುರಾಧ, ಡಾ. ಸುಧಾ ಕಾಮತ್, ಬಿ.ಆರ್. ಅಪರ್ಣಾ ಮಾತನಾಡಲಿದ್ದಾರೆ.

ಸಂಜೆ 4 ಗಂಟೆಗೆ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ನಡೆಯುವ ಬಹಿರಂಗ ಅಧಿವೇಶನಕ್ಕೆ ಬರಹಗಾರ್ತಿ ಬಿ.ಟಿ. ಜಾಹ್ನವಿ ಚಾಲನೆ ನೀಡಲಿದ್ದಾರೆ. ಬಂಡಾಯ ಸಾಹಿತಿ ಕಲೀಂಬಾಷ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದು, ನಂತರ ಪ್ರತಿನಿಧಿಗಳ ಸಮಾವೇಶ ಜರುಗಲಿದೆ.

ದಿನಾಂಕ 7 ರಂದು ನಡೆಯುವ ಅಧಿವೇಶನದಲ್ಲಿ ಅತಿಥಿಗಳಾಗಿ ಎಸ್‌ಯುಸಿಐ ಪದಾಧಿಕಾರಿಗಳಾದ ಕೆ. ರಾಧಾಕೃಷ್ಣ, ಎಐಎಂಎಸ್‌ಎಸ್ ನ ಕೆಯಾ ಡೆ ಆಗಮಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಡಾ.ಪಿ.ಎಂ. ಅನುರಾಧ, ಮಲ್ಲಿಕಾರ್ಜುನ ಹಲಸಂಗಿ, ಶೋಭಾ, ಎಂ.ಆರ್. ಹಿರೇಮಠ, ಬನಶ್ರೀ, ಭಾರತಿ ಉಪಸ್ಥಿತರಿದ್ದರು.

# ದಾವಣಗೆರೆ-ಹರಿಹರ ಸಹಕಾರ ಬ್ಯಾಂಕ್‌ನ 9ನೇ ಶಾಖೆ ಕಾರ್ಯಾರಂಭ







ದಾವಣಗೆರೆ, ಜ. 3- ಜಿಲ್ಲೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾದ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ತನ್ನ ಒಂಭತ್ತನೇ ಶಾಖೆಯನ್ನು ಇಂದು ಆರಂಭಿಸಿತು.

ದಾವಣಗೆರೆ ನಗರದ ಸರಸ್ವತಿ ಬಡಾವಣೆಯಲ್ಲಿ ಈ ಶಾಖೆ ಕಾರ್ಯಾರಂಭವಾಗಿದ್ದು, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರುಗಳು ಜಂಟಿಯಾಗಿ ನೂತನ ಶಾಖೆಯ ಉದ್ಘಾಟನೆಯನ್ನು ನೆರವೇರಿಸಿದರು.

ಭದ್ರತಾ ಕೊಠಡಿಯನ್ನು ಡಾ. ಶಾಮನೂರು ಶಿವಶಂಕರಪ್ಪ, ಎಟಿಎಂ ಅನ್ನು ಹರಿಹರದ ಶಾಸಕ ಬಿ.ಪಿ. ಹರೀಶ್ ಉದ್ಘಾಟಿಸಿದರು.

ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀಮತಿ ಹೆಚ್. ಅನ್ನಪೂರ್ಣ, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀಮತಿ ಎಸ್. ಮಂಜುಳಾ, ಹಿರಿಯ ಲೆಕ್ಕ ಪರಿಶೋಧಕ ಅಥಣಿ ವೀರಣ್ಣ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ಹಿರಿಯ ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ದಾವಣಗೆರೆ ಅರ್ಬನ್ ಬ್ಯಾಂಕ್ ನಿರ್ದೇಶಕ ದೇವರಮನಿ ಶಿವಕುಮಾರ್, ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಆರ್.ಜಿ. ಶ್ರೀನಿವಾಸಮೂರ್ತಿ, ಶಿವ ಸಹಕಾರಿ ಬ್ಯಾಂಕ್ ಉಪಾಧ್ಯಕ್ಷ ಐಗೂರು ಸಿ. ಚಂದ್ರಶೇಖರ್, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಹಿರಿಯ ನಿರ್ದೇಶಕ ಬಿ.ಹೆಚ್. ಪರಶುರಾಮಪ್ಪ, ಮಹಾನಗರ ಪಾಲಿಕೆ ಸದಸ್ಯರುಗಳಾದ ಕೆ.ಎಂ. ವೀರೇಶ್, ಶ್ರೀಮತಿ ಉಮಾಪ್ರಕಾಶ್ ಅವರುಗಳು ವಿಶೇಷ ಆಹ್ವಾನಿತರುಗಳಾಗಿ ಪಾಲ್ಗೊಂಡಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಅವರು ಸಮಾರಂಭಕ್ಕೆ ಆಗಮಿಸಿದ ಅತಿಥಿ ಗಣ್ಯರನ್ನು ಸ್ವಾಗತಿಸಿದರೆ, ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ ಪರಶುರಾಮಪ್ಪ ವಂದಿಸಿದರು.

ಬ್ಯಾಂಕಿನ ನಿರ್ದೇಶಕರುಗಳಾದ ಕಿರುವಾಡಿ ವಿ. ಸೋಮಶೇಖರ್, ಎ.ಹೆಚ್. ಕುಬೇರಪ್ಪ, ಶಂಕರ್‌ರಾವ್ ಖಟಾವ್‌ಕರ್, ಎಸ್.ಕೆ. ಪ್ರಭು ಪ್ರಸಾದ್, ಕೆ.ಎಂ. ಜ್ಯೋತಿ ಪ್ರಕಾಶ್, ಬಿ. ಚಿದಾನಂದಪ್ಪ, ಪಿ.ಹೆಚ್. ವೆಂಕಪ್ಪ, ಬಿ. ನಾಗೇಂದ್ರಚಾರಿ, ಎ. ಕೊಟ್ರೇಶ್, ಶ್ರೀಮತಿ ಉಮಾ ವಾಗೀಶ್, ವಿಶಾಲ್ ಆರ್. ಸಂಘವಿ, ಶ್ರೀಮತಿ ಅನಿತಾ ಕೋಗುಂಡಿ ಪ್ರಕಾಶ್, ಶ್ರೀಮತಿ ಅನುಷಾ ಡಾ. ವೀರೇಂದ್ರಸ್ವಾಮಿ, ಎ.ಹೆಚ್. ಕುಬೇರಪ್ಪ, ಕಿರುವಾಡಿ ವಿ. ಸೋಮಶೇಖರ್, ಕೆ.ಎಂ. ಬಸವರಾಜ್, ಶ್ರೀಮತಿ ಜಿ.ಸಿ. ವಸುಂಧರ, ಶ್ರೀಮತಿ ಶೈಲಾ ಹಾಲಸ್ವಾಮಿ ಕಂಬಳಿ, ವೃತ್ತಿಪರ ನಿರ್ದೇಶಕರಾದ ಆರ್.ವಿ. ಸಿರಸಾಲಿಮಠ್, ಕಿರಣ್ ಆರ್. ಶೆಟ್ಟಿ ಉಪಸ್ಥಿತರಿದ್ದರು.

ಪ್ರಧಾನ ವ್ಯವಸ್ಥಾಪಕ ಎನ್. ತುಳಸಿನಾಥ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

# ಲೋಕ ಅದಾಲತ್ : ವಕೀಲರ ಸಂಘಕ್ಕೆ ಹೈಕೋರ್ಟ್ ಪ್ರಶಂಸೆ



ದಾವಣಗೆರೆ, ಜ.3- ನ್ಯಾಯ ವಿತರಣೆ ವ್ಯವಸ್ಥೆಯಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವಲ್ಲಿಯೂ, ಸಾಮಾಜಿಕ ಶಿಲ್ಪಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಪ್ರಶಂಸನೀಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ವಕೀಲರ ಸಂಘದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ನೂತನ ವರ್ಷಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಪ್ರಶಂಸನಾ ಪತ್ರ ನೀಡಿ ಅವರು ಮಾತನಾಡಿದರು.

ವಕೀಲರ ಸಹಕಾರದಿಂದ ತುಳಿತಕ್ಕೆ ಒಳಗಾದ, ಸಮಾಜದ ಕೆಳಸ್ತರದ ಮತ್ತು ನ್ಯಾಯವಂಚಿತ ಜನರಿಗೆ ನ್ಯಾಯಾಂಗವು ಪರಿಣಾಮಕಾರಿಯಾಗಿ ನ್ಯಾಯ ವಿತರಣೆ ಮಾಡುವಲ್ಲಿ ಸಾಧ್ಯವಾಗಿದೆ. ಆ ನಿಟ್ಟಿನಲ್ಲಿ ವಕೀಲರ ಸೇವೆ ಪ್ರಶಂಸನೀಯ ಎಂದು ಹೇಳಿದರು.

> **ಕಳೆದ ಬಾರಿಯ ಲೋಕ್ ಅದಾಲತ್‌ನಲ್ಲಿ ಅತಿ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಪಡಿಸಿದ್ದಕ್ಕಾಗಿ ಕರ್ನಾಟಕ ಉಚ್ಛ ನ್ಯಾಯಾಲಯವು ದಾವಣಗೆರೆ ಜಿಲ್ಲಾ ವಕೀಲರ ಸಂಘಕ್ಕೆ ಪ್ರಶಂಸಾ ಪತ್ರ ನೀಡಿದ್ದು, ದಾವಣಗೆರೆ ವಕೀಲರ ಸಹಕಾರದಿಂದ 2ನೇ ಬಾರಿಗೆ ಪ್ರಶಂಸನಾ ಪತ್ರ ಪಡೆಯುತ್ತಿರುವುದು ಹೆಮ್ಮೆಯ ವಿಚಾರ.**
>
> **- ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿಜಯಾನಂದ, ನ್ಯಾಯ ವಿತರಣೆಯಲ್ಲಿ ವಕೀಲರ ಸಂಘದ ಸದಸ್ಯರು ನೀಡುತ್ತಿರುವ ಸಹಕಾರ ಶ್ಲಾಘನೀಯ. ನ್ಯಾಯಾಂಗವು ಇಂದು ಶಾಸಕಾಂಗ, ಕಾರ್ಯಾಂಗದ ಕಾವಲಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಹೇಳಿದರು.


ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಮಾತನಾಡಿ, ವಕೀಲರ ಸಂಪೂರ್ಣ ಸಹಕಾರದಿಂದ ಜಿಲ್ಲಾ ವಕೀಲರ ಸಂಘವು ಲೋಕ್ ಅದಾಲತ್‌ನಲ್ಲಿ ಅತಿ ಹೆಚ್ಚು ಪ್ರಕರಣಗಳನ್ನು ಇತ್ಯರ್ಥ ಪಡಿಸಿದ್ದು, ಆ ನಿಟ್ಟಿನಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯವು 2ನೇ ಬಾರಿಗೆ ನೀಡಿರುವ ಪ್ರಶಂಸನಾ ಪತ್ರ ಇಡೀ ವಕೀಲ ಸಮುದಾಯಕ್ಕೆ ಸಂದ ಗೌರವ ಎಂದು ಸಂತಸ ವ್ಯಕ್ತ ಪಡಿಸಿದರು.

ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶ ರಾದ ಎನ್.ಶ್ರೀಪಾದ್, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಧಶರಥ್, 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರವೀಣ್‌ಕುಮಾರ್, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶಿವಪ್ಪ ಜಿ.ಸಲಗರೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ.ಕರೆಣ್ಣವರ್, ವಕೀಲರಾದ ಡಿ.ವಿಜಯಪ್ರಕಾಶ್, ಕೆ.ಎಂ.ಮಲ್ಲಿಕಾರ್ಜುನ, ಎನ್.ಎಂ. ಆಂಜನೇಯ, ಲೋಕಿಕೆರೆ ಸಿದ್ದಪ್ಪ ಮಾತನಾಡಿದರು.

ಈ ವೇಳೆ ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳು, ಕಾರ್ಯದರ್ಶಿ ಎಸ್. ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್.ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ್ ಕಟ್ಟಿಗೆಹಳ್ಳಿಮಠ್, ಎಲ್.ನಾಗರಾಜ್, ಟಿ.ಹೆಚ್.ಮಧುಸೂದನ್, ಎಂ.ಚೌಡಪ್ಪ, ಕೆ.ಎಂ.ನೀಲಕಂಠಯ್ಯ, ಆರ್.ಭಾಗ್ಯಲಕ್ಷ್ಮಿ ಇತರರು ಇದ್ದರು.

# ಶಕ್ತಿ ಯೋಜನೆ ಮಕ್ಕಳ ಪ್ರಾಣಕ್ಕೆ ಮಾರಕ



ಬೆಂಗಳೂರು, ಜ. 3 - ಚುನಾವಣೆ ಲಾಭಕ್ಕಾಗಿ ಅಗ್ಗದ ಗ್ಯಾರಂಟಿಗಳನ್ನು ರೂಪಿಸಿ ಜಾರಿಗೆ ತಂದಿರುವ ಕಾಂಗ್ರೆಸ್ ಸರ್ಕಾರ ಶಾಲಾ ಮಕ್ಕಳ ಪ್ರಾಣ ಹಾಗೂ ಭವಿಷ್ಯಕ್ಕೆ ಮಾರಕವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ಮಹಿಳೆಯರಿಗೆ ಶಕ್ತಿ ತುಂಬುತ್ತೇವೆ ಎಂದು ಹೊರಟ ಕಾಂಗ್ರೆಸ್ ಸರ್ಕಾರ ಶಾಲಾ ಮಕ್ಕಳ ಜೀವ ತೆಗೆಯುತ್ತಿದೆ. ಇದು ಕರ್ನಾಟಕದ ಮಾದರಿ ಎಂದು ಕುಮಾರಸ್ವಾಮಿ ತರಾಟೆಗೆ ತೆಗೆದುಕೊಂಡಿದ್ದಾರೆ.

ತಮ್ಮ ಟ್ವಿಟ್ಟರ್ ಖಾತೆಯಲ್ಲಿ ಶಾಲಾ ಮಕ್ಕಳು ಬಸ್ ಫುಟ್ ಬೋರ್ಡ್ ಮೇಲೆ ನೇತಾಡಿಕೊಂಡು ಅಪಾಯಕಾರಿ ಪ್ರಯಾಣ ಮಾಡುತ್ತಿರುವ ವಿಡಿಯೊ ಹಂಚಿಕೊಂಡಿದ್ದು, ಕಾಂಗ್ರೆಸ್ ಪಕ್ಷಕ್ಕೆ ಟ್ಯಾಗ್ ಮಾಡಿದ್ದಾರೆ.

ಶಕ್ತಿ ಯೋಜನೆಯ ಪರಿಣಾಮ ನಿತ್ಯವೂ ಶಾಲೆಗೆ ಹೋಗಬೇಕಾಗಿರುವ ಮಕ್ಕಳಿಗೆ ಬಸ್ಸುಗಳಲ್ಲಿ ಪ್ರಯಾಣಕ್ಕೆ ಸ್ಥಳಾವಕಾಶ ಸಿಗುತ್ತಿಲ್ಲ, ಶಿಕ್ಷಕರು, ಕಾರ್ಮಿಕರೂ ಇದೇ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆ.

ಆಟೋ, ಲಗೇಜ್ ಆಟೋ, ಗೂಡ್ಸ್ ವಾಹನಗಳನ್ನು ಹತ್ತಿ ಅಪಾಯಕಾರಿ ರಸ್ತೆಗಳಲ್ಲಿ ಮಕ್ಕಳು ಶಾಲೆಗೆ ಹೋಗಿಬರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

ಒಂದೆಡೆ ಬಸ್ಸುಗಳ ಕೊರತೆ, ಇನ್ನೊಂದೆಡೆ ಮಹಿಳೆಯರು ಪ್ರವಾಸಿ ತಾಣಗಳಿಗೆ ಮುಗಿಬಿದ್ದ ಪರಿಣಾಮ ಮಕ್ಕಳು ರಾತ್ರಿಯಾದರೂ ಮನೆ ತಲುಪುತ್ತಿಲ್ಲ ಎನ್ನುವ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದನ್ನು ಕಂಡು ಆಘಾತವಾಗಿದೆ.

ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸಿ, ಶಾಲಾ ಮಕ್ಕಳು ಹಾಗೂ ಹೆಣ್ಣು ಮಕ್ಕಳ ಪರಿಸ್ಥಿತಿ ಅಪಾಯ ಹಾಗೂ ಆತಂಕಕ್ಕೆ ಸಿಲುಕಿದೆ. ಪರೀಕ್ಷೆ ಸಮಯದಲ್ಲಂತೂ ಈ ಶಾಲಾ ಮಕ್ಕಳ ಸಂಕಷ್ಟ ಹೇಳಲಸಾಧ್ಯ.

ಶಕ್ತಿ ಯೋಜನೆ ಬಗ್ಗೆ ತಮ್ಮ ತಕರಾರು ಇಲ್ಲ, ಆದರೆ, ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್ ಸೌಲಭ್ಯ ಕಲ್ಪಿಸಬೇಕು ಎನ್ನುವ ಬೇಡಿಕೆಗೆ ಸಂಪೂರ್ಣ ಬೆಂಬಲವಿದೆ.

ರಾಜ್ಯ ಸರ್ಕಾರ ಕೂಡಲೇ ಈ ಬಗ್ಗೆ ತುರ್ತು ಕ್ರಮ ವಹಿಸಿ, ಶಾಲಾ ಮಕ್ಕಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

# ಜೈಲುಗಳಲ್ಲಿ ಜಾತಿ ಭೇದ ನಿಯಮ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ, ಜ. 3 - ಬಂಧೀಖಾನೆಗಳ ನಿಯಮಗಳು ಜಾತಿ ಭೇದಕ್ಕೆ ಪ್ರಚೋದನೆ ನೀಡುವಂತಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಹಾಗೂ 11 ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

11 ರಾಜ್ಯಗಳ ಜೈಲು ನಿಯಮಗಳು ಜಾತಿ ಭೇದದಿಂದ ಕೂಡಿವೆ. ಖೈದಿಗಳ ಜಾತಿ ಆಧರಿಸಿ ಅವರಿಗೆ ಕೋಣೆಗಳನ್ನು ನೀಡಲಾಗುತ್ತಿದೆ ಎಂದು ವಕೀಲ ಎಸ್. ಮುರಳೀಧರ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ.

ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಮಧ್ಯ ಪ್ರದೇಶ, ಆಂಧ್ರ ಪ್ರದೇಶ, ತೆಲಂಗಾಣ, ಪಂಜಾಬ್, ಒಡಿಶಾ, ಜಾರ್ಖಂಡ್, ಕೇರಳ, ತಮಿಳುನಾಡು ಹಾಗೂ ಮಹಾರಾಷ್ಟ್ರಗಳ ಜೈಲು ನಿಯಮಗಳು ಪಕ್ಷಪಾತಿಯಾಗಿವೆ ಎಂದು ಅರ್ಜಿದಾರರು ದೂರಿದ್ದಾರೆ.

# ದೆಹಲಿ ಪರೇಡ್‌ಗೆ ಸಿ. ಶ್ರೇಯಸ್



ದಾವಣಗೆರೆ, ಜ. 3 - ನಗರದ ಶ್ರೀ ತರಳಬಾಳು ಜಗದ್ಗುರು ಪ್ರೌಢ ಶಾಲೆಯ (ಅನುಭವ ಮಂಟಪದ) ಎನ್.ಸಿ.ಸಿ. ಕೆಡೆಟ್ ಸಾರ್ಜೆಂಟ್ ಸಿ. ಶ್ರೇಯಸ್ ಕರ್ನಾಟಕ ಮತ್ತು ಗೋವಾ ಡೈರೆಕ್ಟರೇಟ್ ವತಿಯಿಂದ ಇದೇ ದಿನಾಂಕ 26ರಂದು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದಾರೆ.

# ದೊಡ್ಡಪೇಟೆಯಲ್ಲಿಂದು ಕಾರ್ತಿಕ

ದೊಡ್ಡಪೇಟೆಯ ಶ್ರೀ ವಿನಾಯಕ ದೇವಸ್ಥಾನದಲ್ಲಿ ಇಂದು ಗುರುವಾರ ರಾತ್ರಿ 9.30ಕ್ಕೆ ಶ್ರೀ ವಿನಾಯಕ ಸ್ವಾಮಿ ಕಡೇ ಕಾರ್ತಿಕ ಮಹೋತ್ಸವ ಏರ್ಪಡಿಸಲಾಗಿದ್ದು, ಶ್ರೀ ಸ್ವಾಮಿಗೆ ವಿಶೇಷ ಆಕರ್ಷಣೆಯಾಗಿ ಕಾಂತಾರ ಅಲಂಕಾರ ಮಾಡಲಾಗುವುದು ಎಂದು ಶ್ರೀ ವಿನಾಯಕ ದೇವಸ್ಥಾನ ಸೇವಾ ಸಂಘ ತಿಳಿಸಿದೆ.

# ನಗರದಲ್ಲಿ ಇಂದು ಸಿರಿಧಾನ್ಯ ನಡಿಗೆ ಕಾರ್ಯಕ್ರಮ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಮತ್ತು ಕೃಷಿಕ ಸಮಾಜದ ಸಹಯೋಗದೊಂದಿಗೆ ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷ ಎಂದು ಘೋಷಣೆ ಮಾಡಿರುವ ಪ್ರಯುಕ್ತ ಇಂದು ಸಿರಿಧಾನ್ಯ ನಡಿಗೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು.

**ಜಾಥಾ :** ಬೆಳಿಗ್ಗೆ 7.15ಕ್ಕೆ ಜಯದೇವ ಸರ್ಕಲ್‌ನಿಂದ ಪ್ರಾರಂಭಗೊಳ್ಳುವ ಜಾಥಾವು ರಾಜ ಬೀದಿಗಳ ಮುಖಾಂತರ ಡಾ. ಎಂ.ಸಿ ಮೋದಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಕಾಸಲ್ ಶ್ರೀನಿವಾಸ ಶೆಟ್ಟಿ ಉದ್ಯಾನವನದಲ್ಲಿ ಮುಕ್ತಾಯಗೊಳಿಸಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ತಿಳಿಸಿದ್ದಾರೆ.


ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ 5 ಮತ್ತು 7ನೇ ವಾರ್ಡಿನಲ್ಲಿ ವಿವಿಧ ಕಾಮಗಾರಿಗಳಿಗೆ

ಭೂಮಿ ಪೂಜೆ ಸಮಾರಂಭ



ಸನ್ಮಾನ್ಯ ಡಾ. ಶಾಮನೂರು ಶಿವಶಂಕರಪ್ಪನವರು

ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ಇವರಿಂದ

| | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1) | ವಾರ್ಡ್ ನಂ 07ರಲ್ಲಿ ಬರುವ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿ (ಆಟದ ಮೈದಾನದ ದಕ್ಷಿಣಕ್ಕೆ) ಚಿರಡೋಣಿ ಕಮಲಮ್ಮ ಶಾಲೆಯಿಂದ ಬಸವನಗರ ಪೋಲೀಸ್ ಠಾಣೆ ಚೌಕಿವರೆಗೆ ಸಿ ಸಿ ರಸ್ತೆ ಅಭಿವೃದ್ಧಿ ಕಾಮಗಾರಿ | 26.00 |
| 2) | ವಾರ್ಡ್ ನಂ 07ರಲ್ಲಿ ಬರುವ ಜಾಲಿನಗರ 1ನೇ ಮುಖ್ಯ ರಸ್ತೆಯಲ್ಲಿ ಮಂಜುನಾಥ ಜನರಲ್ ಸ್ಟೋರ್‌ನಿಂದ ಶಿವಾಲಿ ಮುಖ್ಯ ರಸ್ತೆಯವರೆಗೆ ಎರಡು ಕಡೆ ಸಿ ಸಿ ಚರಂಡಿ, ಜಾಲಿನಗರ 2ನೇ ಮುಖ್ಯ ರಸ್ತೆಯ 4ನೇ ಅಡ್ಡ ರಸ್ತೆಯಲ್ಲಿ(ಚರ್ಚ್ ರಸ್ತೆ) ಭಾರತ್ ಮಟನ್ ಸ್ಟಾಲ್‌ನಿಂದ ವಿಶ್ವ ಜ್ಯೋತಿ ಮನೆಯವರೆಗೆ ಸಿ ಸಿ ಚರಂಡಿ. ಇ ಡಬ್ಲ್ಯೂ ಎಸ್ ಕಾಲೋನಿ 1ನೇ ಮುಖ್ಯ ರಸ್ತೆಯಲ್ಲಿ ಚರಂಡಿ ಎತ್ತರಿಸಿ ಡೆಕ್ ಸ್ಲ್ಯಾಬ್ ಹಾಗೂ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ | 45.00 |
| 3) | ವಾರ್ಡ್ ನಂ. 07ರಲ್ಲಿ ಬರುವ ಜಾಲಿನಗರ 1ನೇ ಅಡ್ಡ ರಸ್ತೆಯಲ್ಲಿ 1ನೇ ಮುಖ್ಯ ರಸ್ತೆಯಿಂದ 2ನೇ ಮುಖ್ಯ ರಸ್ತೆಯವರೆಗೆ ಸಿ ಸಿ ಚರಂಡಿ ಅಭಿವೃದ್ಧಿ ಕಾಮಗಾರಿ | 14.00 |
| 4) | ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಉದ್ಯಾನವನಗಳು ಹಾಗೂ ಪಾಲಿಕೆ ಖಾಲಿ ನಿವೇಶನಗಳ ಸಂರಕ್ಷಣೆ ಕಾಮಗಾರಿ (ಮುಂದುವರೆದ ಕಾಮಗಾರಿ) | 36.50 |
| 5) | ವಾರ್ಡ್ ನಂ 05 ಎಸ್ ಪಿ ಎಸ್ ನಗರ 2ನೇ ಹಂತಕ್ಕೆ ಹೋಗುವ ಗುರುಕೊಟ್ಟೂರೇಶ್ವರ ಮೆಡಿಕಲ್ ಶಾಪ್ ಎದುರು ತಿರುಮಲ ಬಾರ್ ಹತ್ತಿರ ಒಳಚರಂಡಿ ಅಭಿವೃದ್ಧಿ ಕಾಮಗಾರಿ | 15.00 |

ಈ ಕಾಮಗಾರಿಯ ಭೂಮಿ ಪೂಜೆಗೆ ಆಗಮಿಸುತ್ತಿರುವ ಮಹಾಪೌರರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಮಹಾನಗರ ಪಾಲಿಕೆ ಎಲ್ಲಾ ಸದಸ್ಯರು, ಆಯುಕ್ತರು, ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ

ಹೃದಯಪೂರ್ವಕ ಸ್ವಾಗತ, ಸುಸ್ವಾಗತ

ಆರ್. ವಾಸುದೇವ್ ಕಾಂಗ್ರೆಸ್ ಮುಖಂಡರು

ದಿನಾಂಕ : 04.01.2024 ಗುರುವಾರ

ಸಮಯ : ಮಧ್ಯಾಹ್ನ 1 ಗಂಟೆಗೆ
ಸ್ಥಳ : ದೇವರಾಜ ಅರಸು ಬಡಾವಣೆ ದಾವಣಗೆರೆ.

ಸಮಯ : ಮಧ್ಯಾಹ್ನ 1.30 ಗಂಟೆಗೆ
ಸ್ಥಳ : ಶ್ರೀ ಗುರು ಕೊಟ್ಟೂರೇಶ್ವರ ಮೆಡಿಕಲ್ ಶಾಪ್ ಎದುರು, ಎಸ್.ಪಿ.ಎಸ್. ನಗರ, ದಾವಣಗೆರೆ.

ಇಟ್ಟಿಗುಡಿ ಮಂಜುನಾಥ್ ಕಾಂಗ್ರೆಸ್ ಮುಖಂಡರು



ಪ್ರಥಮ ಪುಣ್ಯಸ್ಮರಣೆ



ದಿ|| ಶ್ರೀಮತಿ ಗಂಗಮ್ಮ ಮತ್ತು ದಿ|| ಶ್ರೀ ಎಸ್.ಬಿ. ಮಹದೇವಪ್ಪನವರ ಮಗ

ಶ್ರೀ ಎಸ್.ಎಂ. ರಾಜಶೇಖರಪ್ಪ

ನಿವೃತ್ತ ಡೆಪ್ಯೂಟಿ ಸೆಕ್ರೆಟರಿ, ನೀರಾವರಿ ಇಲಾಖೆ, ಕರ್ನಾಟಕ ಸರ್ಕಾರ.

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಕೆ. ಸುಶೀಲ ರಾಜಶೇಖರಪ್ಪ
ಪುತ್ರಿ : ಡಾ|| ಶಶಿರೇಖಾ ಅಳಿಯ : ಡಾ|| ಶ್ರೀಹರ್ಷ
ಪುತ್ರ : ಶ್ರೀ ರಾಜು ಸೊಸೆ : ಶ್ರೀಮತಿ ತೇಜಸ್ವಿನಿ ಮತ್ತು
ಶ್ರೀಮತಿ ಪೂರ್ಣಿಮ ಮತ್ತು ಶ್ರೀ ಹರೀಶ್
ಸಹೋದರಿಯರು : ಶ್ರೀಮತಿ ಪ್ರೇಮಾ ಕೊಟ್ರಪ್ಪ,
ಶ್ರೀಮತಿ ಸಾವಿತ್ರಿ ಎಸ್.ಎಸ್. ಪಾಟೀಲ್, ಶ್ರೀಮತಿ ಮಲ್ಲಮ್ಮ ನಾಗರಾಜ್
ಶ್ರೀಮತಿ ರತ್ನಮ್ಮ ಡಾ. ಶಿವನಪ್ಪ, ಮೊಮ್ಮಕ್ಕಳು ಹಾಗೂ ಬಂಧು-ಬಾಂಧವರು